# ಸಂಪ್ರೀತಿ ಸಮೃದ್ಧಿ

ನಿಮ್ಮ ಮನ ಮನೆಗಳಿಗೆ...

ಮಾಸಿಕ


Sampreethi - Samruddhi | Volume : 8 | Issue : 08 | Dec. 2025 | Pages : 32 | ₹ 20/-

ಸಂಪ್ರೀತಿ ಸಮೃದ್ಧಿ | ಸಂಪುಟ : 8 | ಸಂಚಿಕೆ : 08 | ಡಿಸೆಂಬರ್ 2025 | ಪುಟಗಳು : 32 | ₹ 20 ರೂ.



• ಯುಗದಕವಿ, ಜಗದಕವಿ, ರಸಋಷಿ, ರಾಷ್ಟ್ರಕವಿ •



ಸಂಪ್ರೀತಿ ಸಮೃದ್ಧಿ

ನಿಮ್ಮ ಮನ ಮನೆಗಳಿಗೆ...

ವಿವಿಧ ಕ್ಷೇತ್ರಗಳಲ್ಲಿ ಅತ್ಯುತ್ತಮ ಕೊಡುಗೆಗಳನ್ನು ಗುರುತಿಸುವ ಪ್ರತಿಷ್ಠಿತ ಅಂತರರಾಷ್ಟ್ರೀಯ ಪ್ರಶಸ್ತಿ




# ನೊಬೆಲ್ ಪ್ರಶಸ್ತಿ

# ಸಂಪ್ರೀತಿ – ಸಮೃದ್ಧಿ

ನಿಮ್ಮ ಮನ ಮನೆಗಳಿಗೆ...

ಮಾಸಿಕ

**ಡಿಸೆಂಬರ್ – 2025**

**ಸಂಪುಟ 8, ಸಂಚಿಕೆ 8**

ಸಂಪಾದಕರು

**ಡಾ|| ಸಿ. ನಂಜುಂಡಯ್ಯ**


**ಚಂದಾ ವಿವರ :**

| | |
|---|---|
| 10 ವರ್ಷಕ್ಕೆ | ರೂ.2000/– |
| 05 ವರ್ಷಕ್ಕೆ | ರೂ.1000/– |
| 02 ವರ್ಷಕ್ಕೆ | ರೂ.500/– |

ಹಣವನ್ನು ಮನಿಯಾರ್ಡರ್, ಬ್ಯಾಂಕ್ ಡ್ರಾಫ್ಟ್ ಮೂಲಕ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದು.


ಸಂಪಾದಕರು
**ಸಂಪ್ರೀತಿ – ಸಮೃದ್ಧಿ**
ನಂ. 83, ಬಸವಣ್ಣ ದೇವಸ್ಥಾನ ರಸ್ತೆ
ದೊಡ್ಡಸೋಮನಹಳ್ಳಿ,
ಮಾಗಡಿ ತಾಲ್ಲೂಕು,
ಬೆಂಗಳೂರು ದಕ್ಷಿಣ ಜಿಲ್ಲೆ – 562 131.

**#66, ಸಂಪ್ರೀತಿ – ಸದನ ಸರ್ಕಾರಿ ಆಸ್ಪತ್ರೆ ಪಕ್ಕದ ರಸ್ತೆ, ಮಾಗಡಿ – 562 120 ಬೆಂಗಳೂರು ದಕ್ಷಿಣ ಜಿಲ್ಲೆ**

ಮುದ್ರಕರು
**ಕಂಪ್ಯೂಟರ್ ವರ್ಲ್ಡ್**
ಜಿ.ಟಿ.ವರ್ಲ್ಡ್ ಮಾಲ್ ಹತ್ತಿರ
ಮಲ್ಲಿಗೆ ತೋಟ, ಮಾಗಡಿ ರಸ್ತೆ,
ಬೆಂಗಳೂರು – 560 023.


ಓದುಗರು ತಮ್ಮ ಅಭಿಪ್ರಾಯಗಳನ್ನು ಮತ್ತು ಲೇಖಕರು ಲೇಖನಗಳನ್ನು ಕೆಳಗಿನ ಈ–ಮೇಲ್ ವಿಳಾಸಕ್ಕೆ ಕಳುಹಿಸಬಹುದು.


sampreethisamruddhi@gmail.com
**8971608213**



ಸಂಪ್ರೀತಿ – ಸಮೃದ್ಧಿ


## ಸಂಪಾದಕೀಯ

'ಯದ್ ಭಾವಂ ತದ್ಭವತಿ, ಭಾವದಂತೆ ಬದುಕು, ಕ್ರಿಯೆ, ಕರ್ಮ. ಅಂತೆಯೇ ಭಾವ ಶುದ್ಧವಿದ್ದರೆ ಭಾಗ್ಯಕ್ಕೇನು ಕಡಿಮೆ!' ಎಂದರು ಹಿರಿಯರು. ನಮ್ಮ ಭಾವವು ಶುದ್ಧವೂ ಪರಿಪೂರ್ಣವೂ, ಸುಂದರವೂ ಆಗಬೇಕು.

ಅದು ಭಾವವಿಕಾಸ. ಭಾವಗತ ಕಲ್ಮಶ ಕಳೆದಾಗ ಮಾತ್ರ ಅದು ಸಾಧ್ಯ. ಮೊದಲನೆಯ ಕಲ್ಮಶ ಅತಿಯಾಶೆ ಅಥವಾ ದುರಾಶೆ. ಇದನ್ನೇ ಮೋಹವೆಂತಲೂ ಕರೆಯುವರು. ಈ ಆಶೆಯ ಪಾಶ ಹರಿಯಬೇಕು. ಮೋಹದ ಮಂಜು ಕರಗಬೇಕು. ಇಲ್ಲದಿದ್ದರೆ ಭವಬಂಧನ, ದುಃಖ ದುಮ್ಮಾನ ತಪ್ಪಿದ್ದಲ್ಲ.

ಹೈದರಾಬಾದ ನಿಜಾಮ್ ಆಗರ್ಭ ಸಿರಿವಂತ, ದೇಶವು ಆಕಸ್ಮಿಕವಾಗಿ ಆರ್ಥಿಕ ಮುಗ್ಗಟ್ಟಿಗೆ ಸಿಲುಕಿತು. ಅದು ಚೀನಾ ದಾಳಿಯಿಂದ ಸಂಭವಿಸಿತ್ತು. ಪಂಡಿತ ಜವಾಹರಲಾಲ್ ನೆಹರೂರವರು ಆಗಿನ ಪ್ರಧಾನಮಂತ್ರಿ, ದೇಶದ ರಕ್ಷಣಾ ಖಾತೆಗೆ ಸಹಾಯ ಮಾಡಬೇಕೆಂದು ಅವರು ಭಾರತದ ಪ್ರಜೆಗಳಿಗೆ ವಿನಂತಿಸಿದರು. ಎಲ್ಲರೂ ತಮ್ಮ ಕೈಲಾದಷ್ಟು ಧನಸಹಾಯ ಮಾಡುತ್ತಿದ್ದರು.

ಹೈದರಾಬಾದ ನಿಜಾಮನ ಸರದಿ ಬಂದಾಗ ಆತ ಹೇಳಿದ್ದೇನು? "I am too poor to donate anything to your defence fund" ರಕ್ಷಣಾ ಖಾತೆಗೆ ಸಹಾಯ ಮಾಡುವಷ್ಟು ಸಿರಿವಂತನು ನಾನಲ್ಲ!" ಇದೆಂಥ ಬಡತನ? ಇದು ಬಡತನವಲ್ಲ ದುರಾಶೆ, ವ್ಯಾಮೋಹ!

ಓರ್ವ ತಾಯಿಯ ತೊಡೆಯ ಮೇಲೆ ಹಸುಗೂಸು ಮಲಗಿದೆ. ಅದಕ್ಕಿನ್ನೂ ಸರಿಯಾಗಿ ನಡೆಯಲು, ನೋಡಲು, ನುಡಿಯಲು ಬರುವುದಿಲ್ಲ. ಆದರೂ ತಾಯಿಯು ಮಗುವಿನ ನಗೆಮೊಗ ನೋಡುತ್ತಲೇ ಹಗಲುಗನಸು ಕಾಣಲು ತೊಡಗುತ್ತಾಳೆ. ಇದ್ದಕ್ಕಿದ್ದಂತೆ ಮಗನು ಬೆಳೆದು ವಿದ್ಯಾವಂತನೂ ಪದವೀಧರನೂ ಆಗಿಬಿಡುತ್ತಾನೆ. ದೇಶ–ವಿದೇಶದ ಜನರು ಈತನಿಗೆ ಹೆಣ್ಣು ಕೊಡಲು ನಾಮುಂದೆ ತಾಮುಂದೆ ಎಂದು ಈತನ ಮನೆ ಎದುರು ಸಾಲುಗಟ್ಟುತ್ತಾರೆ. ಅಷ್ಟರಲ್ಲಿ ತಾಯಿಗೆ ಎಚ್ಚರವಾಗುತ್ತದೆ, ಹಗಲುಗನಸಿನ ಮಹಲು ಮುರಿದು ಬೀಳುತ್ತದೆ ! ಒಂದು ಕ್ಷಣದಲ್ಲಿ ಮೋಹದ ಮಂಜು ಕರಗಿಹೋಗುತ್ತದೆ.

ಇಂಥ ಮನಸ್ಸು– ಭಾವ ವಿಕಾಸವಾಗಲು ಕವೀಂದ್ರರಾದ ರವೀಂದ್ರರು ಹೇಳುವ ಮಾತಿನ ಭಾವ ಹೀಗಿದೆ– "ನಿನ್ನ ಮನೆಯ ಕಿಟಕಿ, ಬಾಗಿಲು ತೆಗೆದುಬಿಡು. ಆನಂದ ರವಿಕಿರಣ ಒಳಬರಲಿ" ಋಷಿ– ಮುನಿಗಳಾದರೂ आनो भद्राः क्रतवो यन्तु ಎಂದು ಪ್ರಾರ್ಥಿಸಿದರು. ಒಳ್ಳೆಯ ವಿಚಾರಗಳು, ಹತ್ತು ದಿಕ್ಕಿನಿಂದ ನಮ್ಮತ್ತ ಹರಿದು ಬರಲಿ" ಎಂಬುದೇ ಅವರ ಭಾವ ! 'ಮನುಷ್ಯನ ಭಾವ ವಿಕಾಸವಾಗಬೇಕಾದರೆ ಅವನು ನಿಸರ್ಗದತ್ತ ಮರಳಬೇಕು' ಎಂದು ಬರ್ನಾಡ ಶಾ ಹೇಳುತ್ತಾರೆ. ಒಂದರ್ಥದಲ್ಲಿ ನಿಸರ್ಗ ಬೇರೆಯಲ್ಲ; ಸ್ವರ್ಗ ಬೇರೆಯಲ್ಲ. "God manifests in the form of nature!" ನಿಸರ್ಗವೇ ನಿಜವಾದ ಸ್ವರ್ಗ! ದೇವರೇ ನಿಸರ್ಗದ ರೂಪದಲ್ಲಿ ಅಭಿವ್ಯಕ್ತನಾಗುವನು. ಅಂಥ ನಿಸರ್ಗ ಸಂಗದಲ್ಲಿ ಸತ್ಯದರ್ಶನ ಸಹಜ ಸಂಭವಿಸುತ್ತದೆ. ಆಶೆಯ ಪಾಶ ಹರಿದು ಮೋಹದ ಮಂಜು ಕರಗಿ ಮನುಷ್ಯ ಮುಕ್ತನಾಗುತ್ತಾನೆ. ಅದು ವಿಕಸಿತ ಭಾವ ! ॐ



# ಧನುರ್ಮಾಸ ಪ್ರಾರಂಭ ತನ್ನಿಮಿತ್ತ
# ಈ ಸಕಾಲಿಕ ಲೇಖನ
# ಆಧ್ಯಾತ್ಮಿಕ ಸಾಧನೆಯ ಧನುರ್ಮಾಸ

ಡಾ. ಗುರುರಾಜ ಪೋಶೆಟ್ಟಿಹಳ್ಳಿ (ಪ್ರಣವ)

ಬೆಳಗಾಗೆದ್ದು ಯಾರ್‍ಯಾರ ನೆನೆಯಲಿ ಎಂದುಕೊಳ್ಳುತ್ತಲೇ ಇಂದ್ರಿಯಗಳನ್ನು ನಿಗ್ರಹ ಮಾಡುವ ಸುಸಮಯವೇ ಧನುರ್ಮಾಸ. ಧನುರ್ಮಾಸ ದೇವತಾರಾಧನೆಗಷ್ಟೇ ಮೀಸಲಲ್ಲ. ಆಧ್ಯಾತ್ಮಿಕವಾಗಿ, ಆದಿಭೌತಿಕವಾಗಿ ಅಭಿವೃದ್ಧಿ ಹೊಂದಲಿದುವೇ ಸೂಕ್ತ ಮಾಸವಾಗಿದೆ. ಧನುರ್ಮಾಸ ದೇವತಾರಾಧನೆಗೆಂದೇ ಮೀಸಲಾದ ಮಾಸ. ಉಪನಿಷತ್‌ನಲ್ಲಿ ಧನು ಎಂದರೆ ಪ್ರಣವ ನಾದವೆಂದಾಗುತ್ತದೆ. ಪ್ರಣವ ನಾದೋಪಾಸನೆಯೇ ಈ ಮಾಸದ ವಿಶೇಷತೆಗಳಲ್ಲಿ ಒಂದು. ಮಾರ್ಗಶಿರ ಮಾಸದಲ್ಲಿ ವೃಶ್ಚಿಕ ರಾಶಿಯಲ್ಲಿರುವ ಸೂರ್ಯನು ಧನುರ್ಮಾಸದಲ್ಲಿ ಧನು ರಾಶಿಯನ್ನು ಪ್ರವೇಶಿಸುತ್ತಾನೆ. ಮಕರ ಸಂಕ್ರಾಂತಿವರೆಗೂ ಧನುರಾಶಿಯಲ್ಲೇ ಇರುತ್ತಾನೆ.

ಧನಸ್ಸು ಎಂದರೆ ಬಾಗಿರುವುದು. ಧನುರ್ ಮಾಸದಲ್ಲಿ ಚಳಿಯ ತೀವ್ರತೆ ಹೆಚ್ಚಿರುತ್ತದೆ. ಆ ಕಾರಣ ದೇಹದ ನಡು ಬಾಗುತ್ತದೆ. ದೇಹ ಪ್ರಕೃತಿಯಲ್ಲಿ ವ್ಯತ್ಯಯವಾದರೂ ಇಂದ್ರಿಯ ಪ್ರಜ್ಞೆ ಜಾಗೃತವಾಗಬೇಕು, ಮನಸ್ಸನ್ನು ದೈವನಲ್ಲಿ ಸ್ಥಿರೀಕರಿಸಲು ಇದುವೇ ಸುಸಮಯ ಎನ್ನುತ್ತಾರೆ. ಹೀಗೆ ಇಂದ್ರಿಯ ನಿಗ್ರಹಕ್ಕೆ ಪೂರಕವಾಗುವ ಧನುರ್ಮಾಸ ಆಧ್ಯಾತ್ಮಿಕವಾಗಿ ಹಾಗೂ ಧಾರ್ಮಿಕವಾಗಿಯೂ ವಿಶೇಷ ಮಹತ್ವವನ್ನು ಪಡೆದುಕೊಂಡಿದೆ. ಈ ಸಂದರ್ಭದಲ್ಲಿ ಬ್ರಾಹ್ಮೀ ಮೂಹೂರ್ತದಲ್ಲೇ ದೇಗುಲಗಳಲ್ಲಿ ಶ್ರೀಹರಿಯ ಪ್ರೀತ್ಯರ್ಥವಾಗಿ ವಿಶೇಷ ಪೂಜೆಗಳನ್ನು ಮಾಡುತ್ತಾರೆ. ಶಿವಾರಾಧನೆಗೂ ವಿಶೇಷ ಮಹತ್ವವಿದೆ.

### ಭಗವಂತನ ಸಂಪ್ರೀತಿಗೆ ತಿರುಪ್ಪಾವೈ

ಮಾಸಗಳಲ್ಲಿ ಶ್ರೇಷ್ಠವಾದ ಮಾರ್ಗಶಿರ ಮಾಸದಲ್ಲಿ ಬರುವುದೇ ಧನುರ್ಮಾಸ. ಧನುರ್ಮಾಸದಲ್ಲಿ ತಿರುಪ್ಪಾವೈ ಪಾರಾಯಣಕ್ಕೆ ವಿಶೇಷ ಆದ್ಯತೆ. ತಿರುಪ್ಪಾವೈಯು ಭಗವಂತನನ್ನು ದರ್ಶಿಸಲು ಆಸೆ ಪಡುವ ಎಲ್ಲ ಜೀವರಿಗೂ ಪ್ರತಿದಿನವೂ ಪಠಿಸಿ, ಅನುಭವಿಸಬೇಕಾದ ಅಂಶಗಳಿಂದ ಕೂಡಿದೆ. ಭಾಗವತರ ಕರ್ತವ್ಯಗಳನ್ನೂ ಬೋಧಿಸುವುದಲ್ಲದೆ ಪರಮಪುರುಷಾರ್ಥ ಯಥಾವಸ್ಥಿತ ಸ್ವರೂಪವನ್ನು ಖಚಿತವಾಗಿ ತಿಳಿಸಿಕೊಡುವ ಉದ್ಗ್ರಂಥವೂ ಆತದೆ.

ಯುದ್ಧರಂಗದ ಮಧ್ಯದಲ್ಲಿ ಧರ್ಮಾಧರ್ಮಗಳ ವಿಷಯದಲ್ಲಿ ಸರಿಯಾದ ತಿಳುವಳಿಕೆ ಇಲ್ಲದ ಅರ್ಜುನನಿಗೆ ತನ್ನ ಯೋಗ ಮತ್ತು ವಿಭೂತಿಗಳ ವಿವರಗಳನ್ನು ಹೇಳುತ್ತಾ ಶ್ರೀ ಕೃಷ್ಣನು 'ಮಾಸಾನಾಂ ಮಾರ್ಗಶೀರ್ಷೋಹಮ್' –

ತಿಂಗಳುಗಳಲ್ಲೆಲ್ಲ ನಾನೇ ಮಾರ್ಗಶಿರ್ಷ ಮಾಸವಾಗಿರುವೆನು ಎಂದು ತಿಳಿದು ಹೇಳಿದನು. ಇಂತಹ ಬಹುಶ್ರೇಷ್ಠ ಮಾಸವಾದ ಮಾರ್ಗಶಿರ್ಷವನ್ನು ಮಾರ್ಗಶಿರವೆಂದೂ, ಧನುರ್ಮಾಸವೆಂದೂ ಕರೆಯುತ್ತಾರೆ. ಭಗವಂತನಾದ ಶ್ರೀಕೃಷ್ಣನಿಂದಲೇ ಎತ್ತಿ ಹೇಳಲ್ಪಟ್ಟಿರುವ ಈ ಧನುರ್ಮಾಸವು ಪ್ರತಿವರ್ಷವೂ ಶ್ರೀವೈಷ್ಣವ (ವಿಶಿಷ್ಟಾದ್ವೈತಿಗಳು) ರಲ್ಲಿ ಬಹುದೊಡ್ಡ ಸಂಚಾಲನೆಯನ್ನೇ ಉಚಿಟುಮಾಡುತ್ತದೆ.

ಈ ತಿಂಗಳು ಪೂರ್ತಿ ಬೆಳಗಿನ ಜಾವ 4 ಗಂಟೆಯಿಂದಲೇ ದೇವಾಲಯಗಳಲ್ಲಿ ಪೂಜಾದಿಗಳು ಪ್ರಾರಂಭವಾಗಿರುತ್ತವೆ. ಈ ಪೂಜಾದಿಗಳ ಒಂದು ಅವಿಭಾಜ್ಯ ಅಂಗವೇ 'ತಿರುಪ್ಪಾವೈ' ಎಂಬ ತಮಿಳು ಪ್ರಬಂಧಗಳ ಪಠನ, ಸೇವೆ 30 ಪಾಶುರ (ಪದ್ಯ)ಗಳಿರುವ ಈ ತಿರುಪ್ಪಾವೈಯನ್ನು ದಿನಂಪ್ರತಿ ಒಂದೊಂದು ಪಾಶುರವನ್ನಾಗಿ ಹಾಡಿ, ಕೊನೆಯ ದಿವಸ ಮಂಗಳವನ್ನು ಮಾಡುವರು. ಈ ತಿರುಪ್ಪಾವೈನ ಕೊನೆಯ ಎರಡು ಪಾಶುರಗಳನ್ನು ಪ್ರತಿದಿನವೂ ಮನೆಗಳಲ್ಲಿಯೂ, ದೇವಾಲಯಗಳಲ್ಲಿಯೂ ಪೂಜಾದಿಗಳ ಕೊನೆಯಲ್ಲಿ ಹಾಡಿಯೇ ತೀರುತ್ತಾರೆ.

## ಮಾರ್ಗದರ್ಶಕಿ ಅಂಡಾಳ್

'ತಿರುಪ್ಪಾವೈ'ಯನ್ನು ರಚಿಸಿ, ಹಾಡಿ, ತಾನು ತಿಂಗಳು ಪೂರ್ತಿ ಪ್ರಬಂಧ ಸೇವೆ ಮಾಡಿ ಆಚರಿಸಿ ನಮಗೆಲ್ಲ ಮಾರ್ಗದರ್ಶಕರಾದ ಶ್ರೀ 'ಆಂಡಳ್' ಎಂದು ಪ್ರಖ್ಯಾತಳಾದ ಶ್ರೇಷ್ಠ ತಮಿಳು ಸಂತೆ. 'ಗೋದಾದೇವಿ' ಎಂದು ವಿಶೇಷಾವಾಗಿ ಕರೆಸಿಕೊಳ್ಳುವ ಆಂಡಾಳ್ ಶ್ರೀವಿಲ್ಲಿ ಪುತ್ತೂರಿನ ಪೆರಿಯಾಳ್ವಾರ್ ಎಂಬುವವರಿಗೆ ತುಲಸಿ ತೋಟದಲ್ಲಿ ಗಿಡವೊಂದರ ಕೆಳಗೆ ಅಪ್ರಾಕೃತ ಶಿಶುವಾಗಿ ದೊರೆತವಳು. ಈಕೆಯನ್ನು ಆಯೋನಿಜೆ ಎಂದು ಹೇಳುವರು. ಈ ಹೆಣ್ಣು ಶಿಶುವು ಪೆರಿಯಾಳ್ವಾರ್ (ಶ್ರೀ ವಿಷ್ಣು ಚಿತ್ತರು) ರವರ ಜೊತೆಯಲ್ಲೇ ಬೆಳೆದು, ಆ ಊರಿನ ವಟಪತ್ರಶಾಯಿ ದೇವಾಲಯದಲ್ಲಿ ಶ್ರೀ ನಾರಾಯಣನ ಸೇವಾದಿಗಳಲ್ಲಿ ನಿರತಳಾಗಿದ್ದರು. ಭಗವಂತನಿಗಾಗಿ ಪ್ರತಿದಿನವೂ ಪೆರಿಯಾಳ್ವಾರ್ ರವರು ಕಟ್ಟುತ್ತಿದ್ದ ಹೂಹಾರಗಳನ್ನು, ಅದು ಭಗವಂತನಿಗೆ ಕೊಡಲು ಯೋಗ್ಯವೋ, ಅಲ್ಲವೋ ಎಂಬುದನ್ನು ನೋಡಲು, ತಾನೇ ಆ ಹಾರವನ್ನು ಧರಿಸಿ, ಕನ್ನಡಿಯಲ್ಲಿ ನೋಡಿಕೊಂಡು, ಚೆನ್ನಾಗಿದೆ ಎಂದಾದ ಮೇಲೆ ಮಾತ್ರ ಅದನ್ನು ಭಗವಂತನಿಗೆ ಕಳುಹಿಸುತ್ತಿದ್ದರು. ಅದಕ್ಕಾಗಿಯೇ ಅವರಿಗೆ 'ಶೂಡಿಕ್ಕೊಡುತ್ತ (ತಾನು ಧರಿಸಿ ಕೊಟ್ಟ) ನಾಚ್ಚಿಯಾರ್' ಎಂದು ಹೆಸರಾಯಿತು.

## ಕಾತ್ಯಾಯಿನಿ ವ್ರತ

ಕೃಷ್ಣಾವತಾರ ಸಮಯದಲ್ಲಿ, ಕೃಷ್ಣನನ್ನೇ ತಮ್ಮ ಪತಿಯನ್ನಾಗಿ ಪಡೆಯಬೇಕೆಂಬ ಮಹದಾಶಯದಿಂದ ಗೋಪಿಕೆಯರು ಇದೇ ಧನುರ್ಮಾಸದಲ್ಲಿ 'ಕಾತ್ಯಾಯಿನೀ ವ್ರತ'ವನ್ನು ಮಾಡಿ, ಶ್ರೀಕೃಷ್ಣನನ್ನು ಒಲಿಸಿಕೊಂಡಿದ್ದರು. ಇದನ್ನು ಕೇಳಿ ತಿಳಿದ ಆಂಡಾಳ್ ಕೂಡ ಭಗವಂತನನ್ನೇ ತನ್ನ ಪತಿಯನ್ನಾಗಿ ಮನಸ್ಸಿನಲ್ಲಿ ನಿರ್ಧರಿಸಿಕೊಂಡರು. ತನ್ನ ಜೀವನವಿಡೀ ಅವನ ಸೇವೆಗಾಗಿ ಮುಡಿಪಾಗಿಟ್ಟರು. ಭಗವಂತನನ್ನು ವರಿಸುವ ಈ ಬಯಕೆ ದಿನೇ ದಿನೇ ಹೆಮ್ಮರದಂತೆ ಬೆಳೆದು, ಅವಳ ಕನಸು ಮನಸುಗಳಲ್ಲಿಯೂ ಶ್ರೀಮನ್ನಾರಾಯಣನೇ ತುಂಬಿ ಹೋದನು. ಅವಳು ಪರಭಕ್ತಿ ಪರಜ್ಞಾನಗಳಿಂದ ತಾನು ಕೃಷ್ಣನನ್ನು ಅನುಭವಿಸಿದ ಪ್ರಕಾರಗಳನ್ನು 'ನಾಚ್ಚಿಯಾರ್ ತಿರುಮೊಳಿ' ಎಂಬ 143 ಪಾಶುರಗಳಿರುವ ದಿವ್ಯ ಪ್ರಬಂಧದಲ್ಲಿ ಸವಿವಿರವಾಗಿ ಬಣ್ಣಿಸಿರುವಳು. ತಾನು ನಾರಾಯಣನನ್ನು ವರಿಸಿದಂತೆಯೂ, ಅವನೊಂದಿಗೆ ನಡೆದ ತನ್ನ ವಿವಾಹ ಪ್ರಸ್ತಾಪ, ವಿವಿಧ ವಿವಾಹ ಕಲಾಪಗಳು ಮುಂತಾದುವನ್ನು ಅವಳು ತನ್ನ ಕನಸಿನಲ್ಲಿ ಯಥಾವತ್ತಾಗಿ ಕಂಡು ಅನುಭವಿಸಿದಳು. ಈ ಅನುಭವದ ಪರಿಪಾಕವೆಂಬಂತೆ ಭಗವಂತನೊಂದಿಗಿನ ವಿವಾಹದ ವಿವರಗಳನ್ನು ಕೂಡಿರುವ 'ವಾರಣಮಾಯಿರಂ' ಎಂದು ಕರೆಸಿಕೊಂಡಿರುವ 11 ಪಾಶುರಗಳನ್ನು ನಾಚ್ಚಿಯಾರ್ ತಿರುಮೊಳಿಯ ಒಂದು ಅಂಗವಾಗಿ ಹಾಡಿರುವಳು. ಇಂದಿಗೂ ಶ್ರೀ ವೈಷ್ಣವರ ವಿವಾಹಗಳಲ್ಲಿ ಈ ವಾರಣಮಾಯಿರಂನ ಪಾಶುರಗಳನ್ನು ಹಾಡಿ ನಲಿಯುವುದು ಒಂದು ಅವಿಭಾಜ್ಯ ಅಂಗವಾಗಿದೆ.

## ಕುಲವಧುವಿನ ರೂಪದಲ್ಲಿ ಕಂಡವಳೀಕೆ

ಶ್ರೀಮನ್ನಾರಾಯಣನನ್ನೇ ತನ್ನ ಪತಿಯನ್ನಾಗಿ ವರಿಸಿ, ಇಷ್ಟೆಲ್ಲ ಭಾವಗಳಿಂದಲೂ ಅವನಲ್ಲೇ ಮುಳುಗಿದ್ದ ಆಂಡಾಳನ್ನು ನೋಡಿದ ಶ್ರೀ ವಿಷ್ಣುಚಿತ್ತರು ಅವಳನ್ನು ಕುಲವಧುವಿನ ರೂಪದಲ್ಲಿ ಅಲಂಕರಿಸಿ, ಶ್ರೀರಂಗದ ಶ್ರೀರಂಗನಾಥನ ಬಳಿಗೆ ಕರೆದೊಯ್ದರು. ಅಲ್ಲಿ ಪಲ್ಲಕ್ಕಿಯಿಂದ ಇಳಿದ ಆಂಡಾಳ್ ಪರಿಜನರೊಡನೆ, ಸಕಲ ವೈಭವಗಳಿಂದ, ಸರ್ವಾಭರಣಭೂಷಿತಳಾಗಿ, ರಾಣಿಯಂತೆ ಮೆಲ್ಲಡಿಗಳಿಡುತ್ತ ದೇವರ ಸನ್ನಿಧಿ ಸಮೀಪಿಸಿದಳು. ಅಳಗಿಯ ಮಣವಾಳನ್ (ಸುಂದರ ಮದುಮಗ) ಎಂದು ಕರೆಸಿಕೊಳ್ಳುವ 'ಶ್ರೀರಂಗನಾಥ' ಸ್ವಾಮಿಯನ್ನು ಗೋದಾದೇವಿಯು ಆಪಾದಮಸ್ತಕವಾಗಿ ದರ್ಶಿಸಿದಳು. ಪೂರ್ಣ ಮನೋರಥಳಾಗಿ, ಭಗವಂತನನ್ನೇ ಅನುಭವಿಸುತ್ತ ತನ್ಮಯಳಾಗಿ, ಭಗವಂತನ ಪಾದಾರವಿಂದಗಳ ಬಳಿ ಅಂತರ್ಧಾನ ಹೊಂದಿದಳು.

ಆಂಡಾಳ್ ರಚಿಸಿದ 'ತಿರುಪ್ಪಾವೈಯು ಶ್ರೀವೈಷ್ಣವ ಸಂತರಾದ ಆಳ್ವಾರ್‌ಗಳಿಂದ ರಚಿತವಾದ 4000 ದಿವ್ಯ ಪ್ರಬಂಧಗಳಲ್ಲಿ ಶಿರೋಧಾರ್ಯವಾಗಿದೆ. ಯಾವುದೇ ಪ್ರಬಂಧ ಸೇವೆಗೆ ಮೊದಲೂ ಆಂಡಾಳ್‌ರ ತಿರುಪ್ಪಾವೈಯನ್ನು ಸೇವಿಸಲೇಬೇಕೆಂಬ ಸಂಪ್ರದಾಯವು ಅವಳ ಭಗವದ್ರಸದ ಹಿರಿತನವನ್ನು ಎತ್ತಿ ಹೇಳುತ್ತದೆ. ಗುಣಕ್ಕೆ ಮತ್ಸರವಿಲ್ಲ ಎಂಬ ಗಾದೆಯಂತೆ ಇಂತಹ ಆಂಡಾಳನ್ನು ನೂರಾರು ವರ್ಷಗಳ ಹಿಂದೆಯೇ ಇತರ ಆಳ್ವಾರುಗಳ ಸಮಸಮವಾಗಿ ಕಂಡು, ಆದ್ಯತೆಯನ್ನಿತ್ತು, ಅವಳಿತ್ತ ದೈವೀರಸದ ಮಾರ್ಗದರ್ಶನದಲ್ಲಿ ತಮ್ಮೆಲ್ಲರನ್ನೂ ತೊಡಗಿಸಿಕೊಂಡ ಸಂಸ್ಕೃತಿ ಈ ಭಾರತೀಯರದ್ದು. ದಿನಿನಿತ್ಯದ ಸಂಪ್ರದಾಯ ಪೂಜಾಪದ್ಧತಿಗಳಲ್ಲಿ ಮಹಿಳೆಯರನ್ನು ಪೂರ್ಣವಾಗಿ ತೊಡಗಿಸಿಕೊಂಡು, ಅವರಿಗೆ ಪ್ರಾತಿನಿಧ್ಯವನ್ನಿತ್ತ ಮಹತ್ಕಾರ್ಯವನ್ನು ಸುಮಾರು 1000 ವರ್ಷಗಳ ಹಿಂದೆಯೇ ಶ್ರೀರಾಮಾನುಜಾಚಾರ್ಯರು ಕಾರ್ಯಗತಗೊಳಿಸಿದರೆಂದರೆ, ಅವರ ಮಹತ್ತರವಾದ ಸಾಂಸ್ಕೃತಿಕ ಮುನ್ನೋಟವು ಅಪ್ರತಿಮವಾದುದು ಎಂಬುದು ನಿಸ್ಸಂಶಯ!

ಈ ತಿರುಪ್ಪಾವೈಯು ಭಗವಂತನನ್ನು ದರ್ಶಿಸಲು ಆಸೆ ಪಡುವ ಎಲ್ಲ ಜೀವರಿಗೂ ಪ್ರತಿದಿನವೂ ಪಠಿಸಿ, ಅನುಭವಿಸಬೇಕಾದ ಅಂಶಗಳಿಂದ ಕೂಡಿದೆ. ಭಾಗವತರ ಕರ್ತವ್ಯಗಳನ್ನೂ ಬೋಧಿಸುವುದಲ್ಲದೆ ಪರಮಪುರುಷಾರ್ಥದ ಯಥಾವಸ್ಥಿತ ಸ್ವರೂಪವನ್ನು ಖಚಿತವಾಗಿ  ತಿಳಿಸಿಕೊಡವ ಉದ್ಗ್ರಂಥವೂ ಆಗಿದೆ. ತಿರುಪ್ಪಾವೈನ ಸಾರಬೋಧೆಯನ್ನು ತಿಳಿಸುವ 30 ಪಾಶುರಗಳನ್ನು ತಿಳಿಯದವನು ಈ ಭೂಮಿಗೇ ಭಾರವೆಂದು ಅರ್ಥ ಬರುವ'– ಐಐಂದುಮ್ಮೈಂದುಂ ಅರಿಯಾದ ಮಾನಿಡರ್ರೈ ವೈಯ್ಯಂ ಶಮಪ್ಪುದುಂ ವಂಬು' ಎಂಬ ಹೇಳಿಕೆ ಖಂಡಿತ ಅತಿಶಯೋಕ್ತಿಯಾಗಲಾರದು!!

## ಶಿವನ ಆರಾಧನೆಯೇ ವಿಶೇಷ

ಶಿವನೆಂದರೆ ಶಾಂತ. ಆತನೇ ಪರಬ್ರಹ್ಮ ಸ್ವರೂಪಿ. ಜಗತ್ತಿನ ಸೃಷ್ಟಿ–ಸ್ಥಿತಿ–ಲಯಕಾರಕ ಎನ್ನುವ ನಂಬಿಕೆಯಿದೆ. ಆ ಕಾರಣ ಶಿವನನ್ನು ಮಹಾತಪಸ್ವಿ, ಮಹಾಯೋಗಿ, ರುದ್ರ ಭಯಂಕರ, ಅಶುತೋಷ, ಇಷ್ಟ ಪ್ರದಾತ, ದೇವ ದಾನವ ಪ್ರಿಯ, ಊರ್ಧ್ವರೇತಸ್, ಕಲ್ಪನಾತೀತ, ಸ್ವೀಕೃತಿ ಮತ್ತು ವಿಕೃತಿ ಗುಣಗಳನ್ನು ಉಳ್ಳವ, ಅಜ್ಞಾನ ನಾಶಕ ಎಂಬಿತ್ಯಾದಿಯಾಗಿ ಸುತಿಸುತ್ತಾರೆ. ಅದರಲ್ಲೂ ಧನುರ್ಮಾಸದ ಸಂದರ್ಭದಲ್ಲಿ ತಿರುವತ್ರೈರೈ ನಕ್ಷತ್ರ (ಆರ್ದಾ ನಕ್ಷತ್ರ)ದ ದಿನದಂದು ಶಿವಾರಾಧನೆಗೆ ವಿಶೇಷ. ಈ ಸಂದರ್ಭದಲ್ಲಿ ಮಾಡುವ ಶಿವನ ದರ್ಶನಕ್ಕೆ ಆರ್ದ್ರಾ ದರ್ಶನ ಎಂತಲೂ ಕರೆಯುತ್ತಾರೆ.

ಅಂತೆಯೇ ಅಯ್ಯಪ್ಪ ಭಕ್ತರು ಕೂಡಾ ಧನು ಸಂಕ್ರಮಣಕ್ಕೆ ಮೊದಲೇ ಜಪಮಾಲೆ, ಧರಿಸಿ,  ಅಭಕ್ಷ್ಯಭಕ್ಷಣ, ಅಪೇಯಪಾನ ಮೊದಲಾದ ವ್ಯಸನಗಳನ್ನು ತೊರೆಯುತ್ತಾರೆ. ಮಂಡಲ ಪರ್ಯಂತ ದೀಕ್ಷಾಬದ್ಧರಾಗಿ (48 ದಿನಗಳ ಕಾಲ) ಹರಿಹರ ಪುತ್ರನ ಕೃಪೆಗಾಗಿ ವ್ರತವನ್ನು ಆದರಿಸುತ್ತಾರೆ.

## ಬಾಕ್ಸ್ ಆರಾಧನೆಯ ಮಹತ್ತು

ದಕ್ಷಿಣಾಯನದ ಕೊನೆಯ ತಿಂಗಳೇ ಧನುರ್ಮಾಸ, ಸಾಮಾನ್ಯ ನಂಬುಗೆಯಂತೆ ಶೂನ್ಯ ಮಾಸವೆಂದೂ ಹೆಸರಾಗಿದೆ. ಅಂದರೆ ಈ ಮಾಸದಲ್ಲಿ ಯಾವುದೇ ಶುಭ ಕಾರ್ಯಗಳನ್ನು ಮಾಡಬಾರದು ಎನ್ನುವ ಪ್ರತೀತಿಯಿದೆ. ಅದಕ್ಕೆ

ಪೂರಕವೆನ್ನುವಂತೆ ಈ ಮಾಸದಲ್ಲಿ ಮನುಕುಲಕ್ಕೆ ತ್ರಾಸದಾಯಕವಾದ ಧನುರ್ವ್ಯತಿಪಾತ, ಧನುರ್ವೈಧೃತಿ ಮತ್ತಿತರ ಅಶುಭ ದಿನಗಳೂ ಬರುತ್ತವೆ. ಹಾಗಾಗಿ ಬ್ರಾಹ್ಮಿ ಮೂಹೂರ್ತದಲ್ಲಿ ಮಾಡುವ ಪೂಜೆಗೆ ವಿಶೇಷ ಮಹತ್ವವಿದೆ. ಬ್ರಾಹ್ಮೀ ಮೂಹೂರ್ತವು ಆಧ್ಯಾತ್ಮಿಕ ಸಾಧನೆಗೆ, ಧ್ಯಾನಕ್ಕೆ, ದೇವತಾರಾಧನೆಗೆ ಅತ್ಯಂತ ಪ್ರಶಸ್ತವಾಗಿರುತ್ತದೆ. ಈ ಸಮಯದಲ್ಲಿ ಅಶ್ವತ್ಥವೃಕ್ಷಗಳಿಂದ ಆಮ್ಲಜನಕ ಹೆಚ್ಚಾಗಿ ಬಿಡುಗಡೆಯಾಗುವುದರಿಂದ ಬೆಳ್ಳಂಬೆಳಿಗ್ಗೆಯೇ ಅಶ್ವತ್ಥ ವೃಕ್ಷ ಪ್ರದಕ್ಷಿಣೆ ಬರುವ ಸಂಪ್ರದಾಯ ಕೆಲವೆಡೆಯಿದೆ. ಅಶ್ವತ್ಥ ಪ್ರದಕ್ಷಿಣೆಯಿಂದ ಇಹಕ್ಕೂ, ಪರಕ್ಕೂ ಒಳಿತಾಗುತ್ತದೆ.

## ಕೃಷ್ಣಾರ್ಪಣವೇ ಸೋಪಾನ

ನಾರಾಯಣನ ಸ್ಮರಣೆಗೆ ಧನುರ್ಮಾಸವೇ ಶ್ರೇಷ್ಠ. ಈ ಸಂದರ್ಭದಲ್ಲಿ ನಾರಾಯಣೀಯಂ, ತಿರುಪ್ಪಾವೈ ಪಾರಾಯಣ ಮಾಡುತ್ತಾರೆ. ಕೆಲವೆಡೆ ಜಯದೇವ ಕವಿಯ ಗೀತಗೋವಿಂದ ಪಾರಾಯಣ ಮಾಡುವ ಕ್ರಮವೂ ಇದೆ.

ಕನ್ನಡದ ಮುದ್ದಣ ಮನೋರಮೆಯರ ಸಲ್ಲಾಪ ಪ್ರಸಂಗದಂತೆ ಜಯದೇವ ಕವಿಯ ಗೀತಗೋವಿಂದವೂ ಶೃಂಗಾರ ಕಾವ್ಯವಾಗಿದೆ. ಇಂದಿಗೂ ಗೀತಗೋವಿಂದವನ್ನು ಪಾರಾಯಣ ಮಾಡುವ ವಾಡಿಕೆಯಿದೆ. ಗೀತಗೋವಿಂದದಲ್ಲಿ ಜಯದೇವ ಕವಿ ಕೃಷ್ಣ ರಾಧೆಯರ ಪ್ರೇಮವನ್ನು ಸೊಗಸಾಗಿ ವರ್ಣಿಸಿದ್ದಾನೆ. ತನ್ನ ಕೃತಿಯಲ್ಲಿ ದ್ವಾಪರ ಯುಗದ ರಾಧಾಮಾಧವ ವಿಲಾಸವನ್ನು ಮನಮೋಹಕವಾಗಿ ಚಿತ್ರಿಸಿದ್ದಾನೆ. ಕವಿಯ ರಸಾನುಭೂತಿಯ ಪ್ರಕಾರ, ಇಲ್ಲಿ ಹಾಡಿಲ್ಲದೇ ರಾಧೆಯಿಲ್ಲ. ರಾಧೆಯಿಲ್ಲದೇ ಮುರುಳಿಯಿಲ್ಲ. ವೇಣುವಿಲ್ಲದೇ ಗೋಪಾಲನಿಲ್ಲ. ರಾಧಾಕೃಷ್ಣರಿರದೇ ಶೃಂಗಾರವಿಲ್ಲ, ಶೃಂಗಾರವಿಲ್ಲದೇ ರಸಕೆ ಚೈತನ್ಯವಿಲ್ಲ, ಚೈತನ್ಯವಿಲ್ಲದೇ ಕಲೆಯಿಲ್ಲ.

ಕವಿ ಎಚ್. ಎಸ್. ವೆಂಕಟೇಶಮೂರ್ತಿಯವರಂತೂ ಕೃಷ್ಣ ರಾಧೆಯರ ಶೃಂಗಾರ ರಸವನ್ನು 'ಗಾಳಿಯಲೇ ಇದೆ ಕೊಳಲಿನ ನಾದ; ಕಣಕಣದಲ್ಲೂ ಪ್ರಣಯೋನ್ಮಾದ; ಕಡೆಗಣಿಸುತ ಈ ಲೋಕವಿರೋಧ; ಯಮುನೆಯ ಬಳಿಯೇ ಇರುವಳು ರಾಧ....' ಎಂದು ತದೇಕಚಿತ್ತವಾಗಿ ವರ್ಣಿಸುತ್ತಾರೆ. ಅಂದಹಾಗೆ ಜಯದೇವ ಕವಿ ಒಡಿಶಾದ ಪುರಿ ಜಗನ್ನಾಥಕ್ಕೆ ಹತ್ತಿರವಿರುವ ಕುಂದುಬಿಲ್ವ ಗ್ರಾಮದವನು. ಈತ ಗೋವಿಂದದಲ್ಲಿ ಜಯದೇವ ಮತ್ತು ಪದ್ಮಾವತಿಯರೇ ಮೈದಾಳಿದ್ದಾರೆಂಬುದು ಕೆಲವರ ಅಭಿಪ್ರಾಯ.

## ಮೂರ್ತವಾದ ಅಮೂರ್ತಭಾವಗಳು

'ಲೋಕದ ಕಣ್ಣಿಗೆ ರಾಧೆಯು ಕೂಡ ಎಲ್ಲರಂತೆ ಒಂದು ಹೆಣ್ಣು; ನನಗೂ ಆಕೆ ಕೃಷ್ಣನ ತೋರಿದ ದೇವರು ನೀಡಿದ ಕಣ್ಣು' ಎಂದು ಕವಿ ಹಾಡುವಾಗ ಹೌದಲ್ಲವಾ ಎನಿಸುತ್ತದೆ. ಗೀತಗೋವಿಂದ ಹೊರಡಿಸುವ ಜೀವ–ದೇವ ಸಂವಾದದ ಧ್ವನಿಗಳನ್ನು ಗುರುತಿಸುತ್ತಾ ಸಾಗಿದರೆ 'ನಿಜದ ಮೋಕ್ಷಮಾರ್ಗ' ಅಂತರಂಗಕ್ಕೆ ಅರಿವಾಗುತ್ತದೆ. ಜಯದೇವ ಕವಿಯ ಗೀತಗೋವಿಂದವು ಲಲಿತಕಲೆಗಳ (ನೃತ್ಯಕಲೆ, ಶಿಲ್ಪಕಲೆ, ಚಿತ್ರಕಲೆ, ಸಾಹಿತ್ಯ, ಸಂಗೀತ) ಹುಟ್ಟನ್ನೂ ಅದು ವಿಕಸಿತಗೊಂಡ ಗುಟ್ಟನ್ನೂ ಮಾರ್ಮಿಕವಾಗಿ ಕಟ್ಟಿ ಕೊಡುತ್ತದೆ. ಗೋಪಾಲನ ಮುರಳಿಗಾನದಲ್ಲಿ ಸಂಗೀತ, ರಾಧೆಯ ವಿರಹ–ಸನಿಹದಲ್ಲಿ ಸಾಹಿತ್ಯ, ಈ ಸಂಚಾರಿ ಭಾವಗಳನ್ನು ಅಭಿನಯಿಸುವಾಗ ನಾಟ್ಯ. ಇನ್ನು ಶಿಲ್ಪಕಲೆ ಮತ್ತು ಚಿತ್ರಕಲೆಗಳು ಇದರ ಪರಿಣಾಮ ಫಲಿತಾಂಶಗಳನ್ನು ಸ್ಥಾವರವಾಗಿಸುವ, ಅಮೂರ್ತಭಾವಗಳನ್ನು ಮೂರ್ತವಾಗಿಸಿ ಕಣ್ಣು ತೆರೆಸುವ ಮಾಟಕೂಟ ಕೌಶಲವಾಗಿದೆ.

## ದೈವಪ್ರೇಮದ ಯೋಗ

ಗೀತಗೋವಿಂದ ರಚಿಸುವಾಗ ಒಂದು ವಿಸ್ಮಯ ನಡೆಯುತ್ತದೆ. ಸ್ವತಃ ಪರಮಾತ್ಮನೇ ರಾಧೆಯ ವಿರಹದಿಂದ ಬಳಲುತ್ತಾನೆ ಎಂದು ದಾಖಲಿಸುವ ಕವಿ ಅದಕ್ಕೊಂದು ಆಧ್ಯಾತ್ಮಿಕ ಚೌಕಟ್ಟನ್ನು ಹಾಕಿಕೊಡುತ್ತಾನೆ. ಈತನ ಛಂದಸ್ಸಿನ ಚಂದದಲ್ಲಿ ಅಷ್ಟಪದಿಗಳು ಅವತರಿಸುತ್ತವೆ. ತನ್ಮಯತೆ ಚಿನ್ಮಯತೆಯಾಗಿ ಪರಿವರ್ತನೆಯಾದಾಗ ಅಮೃತಫಳಿಗೆ ಘಟಿಸುತ್ತದೆ. ಅನುರಾಗವಾಗಿ ದೈವಪ್ರೇಮದ ಯೋಗವಾಗುತ್ತದೆ. ಈ ಅಂಶವನ್ನೇ ಕನಕದಾಸರು 'ತೊರೆದು ಜೀವಿಸಬಹುದೇ ಹರಿ ನಿನ್ನ ಚರಣಗಳ' ಎಂದದ್ದು.

ಜಯದೇವ ಕವಿ ಶೃಂಗಾರರಸವನ್ನು ಕಾಮನೆ ಅಥವಾ ವಾಂಚೆಗಳ ರೂಪದಲ್ಲಿ ನೋಡಿಲ್ಲ. ಬದಲಿಗೆ ಆಧ್ಯಾತ್ಮಿಕ ದೃಷ್ಟಿಕೋನದಲ್ಲಿ ನೋಡುತ್ತಾನೆ. ಆ ದೃಷ್ಟಿಯಲ್ಲೇ ವರ್ಣಿಸುತ್ತಾನೆ. ಹಾಗೆಂದೇ ಜಯದೇವ ಕವಿಯ ಗೀತಗೋವಿಂದ ಪರಮಾತ್ಮನನ್ನು ಭಜಿಸುವ ಹಾಡಾಯಿತು. ರಾಧೆಯ ಪಾಡು ಸಂವೇದನಾ ಸಾಹಿತ್ಯವಾಯಿತು. ರಾಧೆಯಲ್ಲಿ ಭಕ್ತಗಣ ವಿಲೀನವಾಯಿತು. ಒಂದು ಶೃಂಗಾರ ಕಾವ್ಯವನ್ನು ಹೇಗೆ ಚಿತ್ರಿಸಬೇಕೆಂಬುದಕ್ಕೆ ಜಯದೇವ ಕವಿ ಮಾದರಿಯಾಗುತ್ತಾನೆ.


ಭೋಗ–ಯೋಗ ಸಮನ್ವಯಕ್ಕೆ ಕೃಷ್ಣ ಅತ್ಯುತ್ತಮ ಪ್ರತಿ–ನಿಧಿ, ಈತನ ಪಾತ್ರಸೃಷ್ಟಿಯಲ್ಲಿ ಮನುಕುಲ ಪರಮಗಂತವ್ಯವನ್ನು ಮುಟ್ಟಿದೆ. ಭವ್ಯಾನುಭೂತಿಯು ದಿವ್ಯಾನುಭೂತಿಯಾಗಿ ಮಾರ್ಪಟ್ಟಿದೆ. ಭವವು ದಿವವಾಗಬೇಕು; ಅನುಭವವು ಅನುಭಾವವಾಗಬೇಕು. ಹಾಗಾದಾಗ ಕಾಮವು ಚಪಲವಾಗದೆ ಪ್ರೇಮವಾಗುವ ಚಲವಾಗುತ್ತದೆ.

## ಶುದ್ಧ ಪ್ರೀತಿಯ ಅನುಭೂತಿ

'ಪ್ರೀತಿ ಇಲ್ಲದ ಮೇಲೆ ಮೋಡ ಕಟ್ಟೀತು ಹೇಗೆ? ಹನಿಯೊಡೆದು ಕೆಳಗಿಳಿದು ನೆಲಕ್ಕೆ ಹಸಿರು ಮೂಡಿತು ಹೇಗೆ' ಎಂದು ಕವಿ ಕೇಳುವಾಗ ಈ ಜಗತ್ತನ್ನು ಆವರಿಸಿರುವುದು ಪರಸ್ಪರ ಸಹ ಸಂಬಂಧವಿರುವ ಶುದ್ಧಪ್ರೀತಿ ಎಂದರಿವಾಗುತ್ತದೆ. ಇದನ್ನೇ ದಾರ್ಶನಿಕ ಸಂತರು 'ಜೀವಕಾರುಣ್ಯ' ಎಂದು ಕರೆದು ಮೌಲ್ಯ ಮಾಡಿದರು. 'ನಿನ್ನ ಪ್ರೀತಿಗೆ ಅದರ ರೀತಿಗೆ ಕಣ್ಣಹನಿಗಳೇ ಕಾಣಿಕೆ; ಹೊನ್ನ ಚಂದಿರ ನೀಲಿ ತಾರೆಗೆ ಹೊಂದಲಾರದ ಹೋಲಿಕೆ' ಎಂಬ ಮತ್ತೊಂದು ಕವಿನುಡಿಯನ್ನೂ ಇಲ್ಲಿ ಜ್ಞಾಪಿಸಿಕೊಳ್ಳಬಹುದು. ಇದೇ ಲೋಕನಿಯಮ, ಲೋಕಸೃಷ್ಟಿ. ದೇವದೃಷ್ಟಿ ಎಂದು ಲೇಖಕರು ತುಂಬ ಸುಂದರವಾಗಿ ಅಷ್ಟೇ ಅಧಿಕೃತವಾಗಿ ಹಂತಹಂತವಾಗಿ ಅಭಿವ್ಯಕ್ತಿಸಿದ್ದಾರೆ.

## ಆನಂದಿಸುವ ಮಧುರಾಲಾಪ

ಶೃಂಗಾರವೆಂಬುದು ದೈವಸನ್ನಿಧಿಯನ್ನೇರುವ ಮೆಟ್ಟಿಲು. ಪ್ರೇಮಾತ್ಮವಾಗದೇ ಪರಮಾತ್ಮನನ್ನು ಅರಿಯಲು ಇದಾಗಿದೆ. ಪ್ರೇಮಿಗಳು ಅನುಭವಿಸುವ ಎಲ್ಲ ಮಧುರಾತಿಮಧುರ ವಿರಹದ ನೂರು ತರಹದ ಭಾವೋಲ್ಲಾಸವು ಭಕ್ತಿಯ ಒಂದು ಸ್ತರವಷ್ಟೇ. ಅದು ಅಲ್ಲಿಗೆ ನಿಲ್ಲಬಾರದು. ಮುಂದುವರಿಯಬೇಕು. ಮಧುರಭಕ್ತಿಯಾಗಬೇಕು. ಏಕೆಂದರೆ ಲೌಕಿಕ ಸೆಳೆತ ಮತ್ತು ಆಕರ್ಷಣೆಗಳು ತೀರಿದ ಮೇಲೂ ಪ್ರೇಮ ಮುಂದುವರಿಯಲು ಸಾಧ್ಯ. ಆಗ ಅದು ಲೋಕೋತ್ತರವಾಗುತ್ತದೆ. ಅಂದರೆ ಭಕ್ತರೆಲ್ಲ ಸ್ತ್ರೀಯಾಗಿ ಭಗವಂತನನ್ನು ಪುರುಷನನ್ನಾಗಿ ಆರಾಧಿಸುವ, ಅರ್ಚಿಸುವ, ಹಾತೊರೆಯುವ, ಅವಧರಿಸುವ, ಆನಂದಿಸುವ ಮಧುರಾಲಾಪ. ಇದು ನಮ್ಮ ಪುರಾತನ ಕಾಲದಿಂದ ನಡೆದುಬಂದ ಪದ್ಧತಿಯಾಗಿದೆ. ॐ



### ವಿಶ್ವಾದ್ಯಂತ ವಿಕಲಚೇತನರು ಎದುರಿಸುತ್ತಿರುವ ಸವಾಲುಗಳ ಅರಿವು ಮೂಡಿಸುವ ವಿಶೇಷ ದಿನ

# ಅಂತರರಾಷ್ಟ್ರೀಯ ಅಂಗವಿಕಲರ ದಿನ



ಪ್ರತಿ ವರ್ಷ ಡಿಸೆಂಬರ್ 3 ರಂದು, ಅಂತರರಾಷ್ಟ್ರೀಯ ಅಂಗವಿಕಲರ ದಿನವನ್ನು ಆಚರಿಸಲಾಗುತ್ತದೆ, ಇದು ಅಂಗವಿಕಲರ ಹಕ್ಕುಗಳು ಮತ್ತು ಯೋಗಕ್ಷೇಮವನ್ನು ಉತ್ತೇಜಿಸುತ್ತದೆ. ಈ ದಿನವು ಪ್ರಪಂಚದಾದ್ಯಂತದ ಜನರ ಮೇಲೆ ಅಂಗವೈಕಲ್ಯವು ಹೇಗೆ ಪರಿಣಾಮ ಬೀರುತ್ತದೆ ಎಂಬುದರ ಕುರಿತು ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳ ಬಗ್ಗೆ ಜಾಗೃತಿ ಮೂಡಿಸುತ್ತದೆ.

ಪ್ರಪಂಚದಲ್ಲಿ 1 ಬಿಲಿಯನ್ಗಿಂತಲೂ ಹೆಚ್ಚು ಜನರು ಅಂಗವೈಕಲ್ಯ ಹೊಂದಿದ್ದಾರೆ. ವಿಶ್ವದ ಜನಸಂಖ್ಯೆಯ ಶೇಕಡ 15 ರಷ್ಟು ಅಂಗವೈಕಲ್ಯ ಹೊಂದಿರುವ ವ್ಯಕ್ತಿಗಳು ವಿಶ್ವದ ಅತಿದೊಡ್ಡ ಅಲ್ಪಸಂಖ್ಯಾತರಾಗಿದ್ದಾರೆ. ಇದಲ್ಲದೆ, ಪ್ರತಿ ಏಳು ಜನರಲ್ಲಿ ಒಬ್ಬರು ಅಂಗವೈಕಲ್ಯದಿಂದ ಬಳಲುತ್ತಿದ್ದಾರೆ.

### ವ್ಯಾಖ್ಯಾನ ಮತ್ತು ವಿಧಗಳು

ಅಂಗವೈಕಲ್ಯವನ್ನು ಗಮನಾರ್ಹವಾಗಿ ದುರ್ಬಲಗೊಂಡ ಸ್ಥಿತಿ ಅಥವಾ ಕಾರ್ಯ ಎಂದು ವ್ಯಾಖ್ಯಾನಿಸಲಾಗಿದೆ. ಅಂಗವೈಕಲ್ಯಗಳ ವಿಧಗಳು:

- ದೈಹಿಕ ದುರ್ಬಲತೆ
- ಸಂವೇದನಾ ದುರ್ಬಲತೆ
- ಅರಿವಿನ ದುರ್ಬಲತೆ
- ಬೌದ್ಧಿಕ ದುರ್ಬಲತೆ
- ಮಾನಸಿಕ ಅಸ್ವಸ್ಥತೆ
- ದೀರ್ಘಕಾಲದ ಕಾಯಿಲೆ

### ತಾರತಮ್ಯ ಮತ್ತು ಸವಾಲುಗಳು

ಕೆಲವು ಅಂಗವಿಕಲ ವ್ಯಕ್ತಿಗಳು ಬಹು ಅಂಗವಿಕಲತೆಗಳೊಂದಿಗೆ ಬದುಕುತ್ತಾರೆ. ಯಾವುದೇ ರೀತಿಯ ಅಥವಾ ಎಷ್ಟೇ ಅಂಗವಿಕಲತೆಗಳಿದ್ದರೂ, ಒಬ್ಬರ ಜೀವನದ ಮೇಲೆ ಅಂಗವಿಕಲತೆಯ ಪರಿಣಾಮವು ಆಳವಾಗಿರುತ್ತದೆ. ಅಂಗವಿಕಲತೆಯು ಹೆಚ್ಚಾಗಿ ಕಳಪೆ ಆರೋಗ್ಯಕ್ಕೆ ಕಾರಣವಾಗುತ್ತದೆ. ಹೆಚ್ಚುವರಿಯಾಗಿ, ಅಂಗವಿಕಲ ವ್ಯಕ್ತಿಯು ಕಡಿಮೆ ಶೈಕ್ಷಣಿಕ ಸಾಧನೆಗಳನ್ನು ಸಾಧಿಸಬಹುದು. ಪರಿಣಾಮವಾಗಿ, ಅಂಗವಿಕಲತೆ ಕಡಿಮೆ ಆರ್ಥಿಕ ಅವಕಾಶಗಳಿಗೆ

ಕಾರಣವಾಗಬಹುದು. ಅಂಗವಿಕಲರು ಹೆಚ್ಚಿನ ಬಡತನದ ದರವನ್ನು ಹೊಂದಿರುತ್ತಾರೆ. ಅನೇಕ ದೇಶಗಳು ಮತ್ತು ಸಂಸ್ಕೃತಿಗಳು ಅಂಗವಿಕಲ ವ್ಯಕ್ತಿಗಳನ್ನು ದೂರವಿಡುವುದರಿಂದ ಅವರು ಪ್ರತ್ಯೇಕವಾಗಿ ವಾಸಿಸುತ್ತಾರೆ.

ಹಲವು ವರ್ಷಗಳಿಂದ, ತಾರತಮ್ಯ, ಸೇವೆಗಳ ಪ್ರವೇಶದ ಕೊರತೆ, ಸಾಮಾಜಿಕ ಬೆಂಬಲದ ಕೊರತೆ ಮತ್ತು ಅಂಗವೈಕಲ್ಯದ ಬಗ್ಗೆ ಅಜ್ಞಾನವು ಅಂಗವಿಕಲರು ಎದುರಿಸುತ್ತಿರುವ ಕೆಲವು ಪ್ರಮುಖ ಸವಾಲುಗಳಾಗಿವೆ. ಇಂದಿನ ಒಳಗೊಳ್ಳುವಿಕೆಯ ಯುಗದಲ್ಲೂ ಈ ಸವಾಲುಗಳು ಮುಂದುವರೆದಿವೆ.

ಅಂಗವಿಕಲ ವ್ಯಕ್ತಿಗಳು ಎದುರಿಸುತ್ತಿರುವ ಮತ್ತೊಂದು ಸವಾಲು ಎಂದರೆ ಸಾಕಷ್ಟು ಆರೋಗ್ಯ ಸೇವೆಯನ್ನು ಪಡೆಯುವುದು. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ, ಸಾಕಷ್ಟು ಆರೋಗ್ಯ ಸೇವೆಯನ್ನು ಪಡೆಯುವುದು ವಿಶೇಷವಾಗಿ ಕಷ್ಟಕರವಾಗಿದೆ. ಆಗಾಗ್ಗೆ ದೈಹಿಕ ದೌರ್ಬಲ್ಯ ಹೊಂದಿರುವ ಜನರು ಅಗತ್ಯವಾದ ಚಲನಶೀಲ ಸಾಧನಗಳಿಲ್ಲದೆ ಹೋಗಬೇಕಾಗುತ್ತದೆ. ಅವರು ಗಾಲಿಕುರ್ಚಿಗಳು ಮತ್ತು ಇತರ ಚಲನಶೀಲ ಸಾಧನಗಳಂತಹ ಬೆಂಬಲಗಳಿಲ್ಲದೆ ಬದುಕುತ್ತಾರೆ. ಮಕ್ಕಳು ಶಾಲೆಗೆ ಹೋಗಲು ಸಾಧ್ಯವಿಲ್ಲ, ಮತ್ತು ವಯಸ್ಕರು ಕೆಲಸ ಮಾಡಲು ಸಾಧ್ಯವಿಲ್ಲ. ಕೆಲವು ಸಂದರ್ಭಗಳಲ್ಲಿ, ಸರಳ ಕಾರ್ಯವಿಧಾನ ಅಥವಾ ಪುನರ್ವಸತಿ ಕಾರ್ಯವನ್ನು ಸುಧಾರಿಸುತ್ತದೆ. ದುಃಖಕರವೆಂದರೆ, ಅನೇಕ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಅಂಗವಿಕಲ ವ್ಯಕ್ತಿಗಳು ಇಲ್ಲದೆ ಹೋಗುತ್ತಾರೆ. ಪರಿಣಾಮವಾಗಿ, ಅವರ ಕಾರ್ಯವು ಹೆಚ್ಚಾಗಿ ಕುಸಿಯುತ್ತದೆ.

2006 ರಲ್ಲಿ, ವಿಶ್ವಸಂಸ್ಥೆಯು ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಸಮಾವೇಶವನ್ನು (CRPD) ಅಂಗೀಕರಿಸಿತು. CRPD ಪ್ರವೇಶಸಾಧ್ಯತೆ ಮತ್ತು ಸೇರ್ಪಡೆಯನ್ನು ಅಂಗವಿಕಲ ವ್ಯಕ್ತಿಗಳಿಗೆ ಮೂಲಭೂತ ಹಕ್ಕುಗಳೆಂದು ಘೋಷಿಸಿತು. ದುರದೃಷ್ಟವಶಾತ್, ಈ ಹಕ್ಕುಗಳನ್ನು ಗುರುತಿಸಲು ಇನ್ನೂ ಹೆಚ್ಚಿನದನ್ನು ಮಾಡಬೇಕಾಗಿದೆ.

## ಅಂಗವಿಕಲರ ದಿನವನ್ನು ಹೇಗೆ ಆಚರಿಸುವುದು

ಅನೇಕ ಸಂಸ್ಥೆಗಳು ನಿಧಿಸಂಗ್ರಹಣೆ ಮತ್ತು ಎಲ್ಲರನ್ನೂ ಒಳಗೊಳ್ಳುವ ಸ್ಪರ್ಧೆಗಳೊಂದಿಗೆ ಈ ದಿನವನ್ನು ಆಚರಿಸುತ್ತವೆ. ಕೆಲವು ಸಂಸ್ಥೆಗಳು ಅಂಗವಿಕಲ ವ್ಯಕ್ತಿಗಳ ಸಾಧನೆಗಳನ್ನು ಗುರುತಿಸುವ ಪ್ರಶಸ್ತಿ ಪ್ರದಾನ ಸಮಾರಂಭಗಳನ್ನು ಆಯೋಜಿಸುತ್ತವೆ. ಅತಿಥಿ ಭಾಷಣಕಾರರು ಅಂಗವಿಕಲತೆಯ ಸಮಸ್ಯೆಗಳನ್ನು ಚರ್ಚಿಸುತ್ತಾರೆ ಅಥವಾ ಸ್ಫೂರ್ತಿದಾಯಕ ಕಥೆಗಳನ್ನು ಹಂಚಿಕೊಳ್ಳುತ್ತಾರೆ.

## ಅಂತರರಾಷ್ಟ್ರೀಯ ಅಂಗವಿಕಲರ ದಿನದ ಇತಿಹಾಸ

ವಿಶ್ವಸಂಸ್ಥೆಯು 1981 ನೇ ವರ್ಷವನ್ನು ಅಂಗವಿಕಲ ವ್ಯಕ್ತಿಗಳ ಅಂತರರಾಷ್ಟ್ರೀಯ ವರ್ಷ (IYDP) ಎಂದು ಘೋಷಿಸಿತು. ಈ ಕ್ರಿಯಾ ಯೋಜನೆಯು ಸಮಾನ ಅವಕಾಶಗಳು, ಪುನರ್ವಸತಿ ಮತ್ತು ಅಂಗವಿಕಲತೆಯ ತಡೆಗಟ್ಟುವಿಕೆಗೆ ಒತ್ತು ನೀಡಿತು. IYDP ಯ ಮಹತ್ವದ ಫಲಿತಾಂಶವೆಂದರೆ ಅಂಗವಿಕಲ ವ್ಯಕ್ತಿಗಳ ಕುರಿತಾದ ವಿಶ್ವ ಕಾರ್ಯ ಕಾರ್ಯಕ್ರಮ. 1982 ರಲ್ಲಿ ವಿಶ್ವಸಂಸ್ಥೆಯು ಈ ಕಾರ್ಯಕ್ರಮವನ್ನು ಅಳವಡಿಸಿಕೊಂಡಿತು. ಹೆಚ್ಚುವರಿಯಾಗಿ, 1983 ರಿಂದ 1993 ರವರೆಗಿನ ವರ್ಷಗಳನ್ನು ಅಂಗವಿಕಲ ವ್ಯಕ್ತಿಗಳ ಅಂತರರಾಷ್ಟ್ರೀಯ ದಶಕವೆಂದು UN ಘೋಷಿಸಿತು. 1992 ರಲ್ಲಿ, ಆ ದಶಕ ಮುಗಿಯುವ ಒಂದು ವರ್ಷದ ಮೊದಲು, ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಡಿಸೆಂಬರ್ 3 ನೇ ದಿನಾಂಕವನ್ನು ಅಂಗವಿಕಲ ವ್ಯಕ್ತಿಗಳ ಅಂತರರಾಷ್ಟ್ರೀಯ ದಿನವೆಂದು ಘೋಷಿಸಿತು. ॐ



**ಸಮೃದ್ಧಿ ಸುಜ್ಞಾನ**

'ಯೋಚನೆ ಸಾವಿರ ಇದ್ದರೂ ಗುರಿ
ಒಂದೇ ಇರಲಿ ಜೊತೆಗೆ ಮುಖದಲ್ಲೊಂದು
ಸದಾ ನಗು ಇರಲಿ



ಕ್ರಿಸ್ತನ ಜನ್ಮದಿನವನ್ನು
ಸ್ಮರಿಸುವ ಧಾರ್ಮಿಕ ಮತ್ತು
ಸಾಂಸ್ಕೃತಿಕ ಹಬ್ಬ

# ಕ್ರಿಸ್‌ಮಸ್ ದಿನ



ಕ್ರಿಶ್ಚಿಯನ್ನರು ಆಚರಿಸುವ ಕ್ರಿಸ್ಮಸ್ ಹಬ್ಬವು ದೇವರ ಮಗನೆಂದು ಪೂಜಿಸಲ್ಪಡುವ ಯೇಸುಕ್ರಿಸ್ತನ ಜನನವನ್ನು ಗೌರವಿಸುತ್ತದೆ. ಪ್ರತಿ ವರ್ಷ ಡಿಸೆಂಬರ್ 25 ರಂದು , ಕ್ರಿಸ್ಮಸ್ ಹಬ್ಬವು ಎರಡು ಯುಗಗಳ ಮೂಲಕ ಪ್ರಪಂಚದಾದ್ಯಂತ ಆಚರಿಸಲಾಗುವ ಜಾತ್ಯತೀತ ಮತ್ತು ಧಾರ್ಮಿಕ ರಜಾದಿನವಾಗಿ ಬೆಳೆದಿದೆ. ಭಾರತದಲ್ಲಿ, ಕ್ರಿಸ್ಮಸ್ ರಜಾದಿನವು ಗೆಜೆಟೆಡ್ ರಜಾದಿನವಾಗಿದೆ. ಇದು ಯೇಸುವಿನ ವಂಶಾವಳಿಯನ್ನು ಸ್ಮರಿಸುತ್ತದೆ. ದೇಶಾದ್ಯಂತದ ಕ್ರೈಸ್ತರು ಈ ಸಂದರ್ಭದಲ್ಲಿ ಸಂತೋಷಪಡುತ್ತಾರೆ ಮತ್ತು ಆನಂದಿಸುತ್ತಾರೆ.

ಭಾರತ ಸೇರಿದಂತೆ ಬಹುತೇಕ ದೇಶಗಳಲ್ಲಿ ಡಿಸೆಂಬರ್ 25 ಸಾರ್ವಜನಿಕ ರಜಾದಿನವಾಗಿದೆ . ಹೆಚ್ಚಿನ ಪ್ರಮಾಣದಲ್ಲಿ ಕ್ರಿಶ್ಚಿಯನ್ನರನ್ನು ಹೊಂದಿರುವ ರಾಜ್ಯಗಳಲ್ಲಿ, ರಜಾದಿನವನ್ನು ಅರ್ಥಮಾಡಿಕೊಳ್ಳುವುದು ಸುಲಭ. ಜನನ ದೃಶ್ಯಗಳ ಪ್ರದರ್ಶನ, ಸಾಂತಾಕ್ಲಾಸ್ ಆಗಮನ ಮತ್ತು ಕ್ರಿಸ್ಮಸ್ ಮರಗಳನ್ನು ಬೆಳಗಿಸುವುದು ಕ್ರಿಸ್ಮಸ್ ಋತುವನ್ನು ರೂಪಿಸುವ ಕೆಲವು ಸಂಪ್ರದಾಯಗಳಾಗಿವೆ. ಪ್ರಪಂಚದಾದ್ಯಂತದ ಕ್ರಿಶ್ಚಿಯನ್ನರಿಗೆ, ಕ್ರಿಸ್ಮಸ್ ಅತ್ಯಂತ ಪ್ರಮುಖ ರಜಾದಿನವಾಗಿದೆ.

**ಭಾರತದಲ್ಲಿ ಜನರು ಕ್ರಿಸ್ಮಸ್ ದಿನ ಆಚರಣೆ.**


- ಭಾರತದಲ್ಲಿ ಕ್ರಿಸ್ಮಸ್ ಸಮಯದಲ್ಲಿ, ವಿಶಿಷ್ಟ ಸಂಪ್ರದಾಯಗಳು ಮತ್ತು ಪದ್ಧತಿಗಳ ವಸ್ತ್ರವು ಹಬ್ಬದ ಭೂದೃಶ್ಯವನ್ನು ಅಲಂಕರಿಸುತ್ತದೆ. ಜನರು ಹೃದಯಸ್ಪರ್ಶಿ ಆಚರಣೆಗಳ ಸರಣಿಯಲ್ಲಿ ಭಾಗವಹಿಸುತ್ತಾರೆ, ಅದು ಗಾಳಿಯಲ್ಲಿ ಸಂತೋಷ ಮತ್ತು ಆಚರಣೆಯನ್ನು ತುಂಬುತ್ತದೆ.
- ವಿಶಿಷ್ಟ ಅಭ್ಯಾಸಗಳಲ್ಲಿ ಒಂದು ಬಾಳೆ ಅಥವಾ ಮಾವಿನ ಮರಗಳ ಅಲಂಕಾರವನ್ನು ಒಳಗೊಂಡಿರುತ್ತದೆ. ದೇಶಾದ್ಯಂತ ಸುಲಭವಾಗಿ ಕಂಡುಬರುವ ಈ ಮರಗಳು ಹಬ್ಬದ ಸೃಜನಶೀಲತೆಗೆ ಕ್ಯಾನ್ವಾಸ್‌ಗಳಾಗಿ ಕಾರ್ಯನಿರ್ವಹಿಸುತ್ತವೆ. ಕುಟುಂಬಗಳು ತಮ್ಮ ಮನೆಗಳನ್ನು 'ತೋರನ್' ಎಂದು ಕರೆಯಲ್ಪಡುವ ಬಾಳೆ ಮತ್ತು ಮಾವಿನ ಎಲೆಗಳ ಹಚ್ಚ ಹಸಿರಿನಿಂದ ಅಲಂಕರಿಸಲು ಒಟ್ಟಾಗಿ ಸೇರುತ್ತವೆ. ಮಾರಿಗೋಲ್ಡ್ ಮತ್ತು ಮಾವಿನ ಎಲೆಗಳನ್ನು ಬಳಸಿ ಕುಶಲಕರ್ಮಿಗಳ ಕೈಗಳಿಂದ 'ತೋರನ್' ಬ್ಯಾನರ್‌ಗಳನ್ನು ತಯಾರಿಸುತ್ತಾರೆ, ನಂತರ ಅವುಗಳನ್ನು ದ್ವಾರಗಳ ಮೇಲೆ ಸೊಗಸಾಗಿ ಹೊದಿಸಲಾಗುತ್ತದೆ, ಇದು ಪರಿಮಳಯುಕ್ತ ಮತ್ತು ಹಬ್ಬದ ಸ್ಪರ್ಶವನ್ನು ನೀಡುತ್ತದೆ.
- ಸೂರ್ಯ ಮುಳುಗುತ್ತಿದ್ದಂತೆ, ವಾತಾವರಣವು ಬೆಚ್ಚಗಿನ, ಆಕರ್ಷಕ ದೃಶ್ಯವಾಗಿ ರೂಪಾಂತರಗೊಳ್ಳುತ್ತದೆ. ಒಳಾಂಗಣ ಮತ್ತು ಹೊರಾಂಗಣ ಸ್ಥಳಗಳು ಕಾಗದದ ಲಾಟೀನುಗಳು, ವಿದ್ಯುತ್ ದೀಪಗಳು ಮತ್ತು ಎಣ್ಣೆಯಿಂದ ಉರಿಯುವ ದೀಪಗಳ ಮೃದುವಾದ ಮಿನುಗುವಿಕೆಯೊಂದಿಗೆ ಜೀವಂತವಾಗುತ್ತವೆ. ನಿರ್ದಿಷ್ಟವಾಗಿ ದಕ್ಷಿಣ ಭಾರತವು, ಸಮತಟ್ಟಾದ

ಛಾವಣಿಗಳನ್ನು ಅಲಂಕರಿಸುವ ಸಣ್ಣ ಮಣ್ಣಿನ ದೀಪಗಳೊಂದಿಗೆ ಮೋಡಿಮಾಡುವ ಸ್ಪರ್ಶವನ್ನು ಸೇರಿಸುತ್ತದೆ, ರಾತ್ರಿಯ ಮೋಡಿಮಾಡುವ ಮೋಡಿಯನ್ನು ಬಿತ್ತರಿಸುತ್ತದೆ. ಗೋವಾದಲ್ಲಿ, ಪಶ್ಚಿಮ ಕರಾವಳಿಯುದ್ದಕ್ಕೂ, ನಕ್ಷತ್ರಾಕಾರದ ಕಾಗದದ ಲಾಟೀನುಗಳು ಆಕರ್ಷಕ ನಕ್ಷತ್ರಗಳ ಹಾದಿಯನ್ನು ಸೃಷ್ಟಿಸುತ್ತವೆ.


- ಭಾರತದಲ್ಲಿ ಕ್ರಿಸ್ಮಸ್ನ ಗಮನಾರ್ಹ ಅಂಶವೆಂದರೆ ಕ್ರಿಸ್ಮಸ್ ಕೊಟ್ಟಿಗೆ ಅಥವಾ ನೇಟಿವಿಟಿ ದೃಶ್ಯದ ಸೃಷ್ಟಿ. ಈ ಕಲಾತ್ಮಕ ಟ್ಯಾಬ್ಲೋ ಹೆಚ್ಚಾಗಿ ಮರಳು, ಕಲ್ಲುಗಳು, ಇಟ್ಟಿಗೆಗಳು ಮತ್ತು ಸ್ಥಳೀಯ ಸಸ್ಯಗಳನ್ನು ಒಳಗೊಂಡಿರುತ್ತದೆ, ಇದು ಅದರ ಆಕರ್ಷಣೆ ಮತ್ತು ಕಥೆ ಹೇಳುವಿಕೆಯನ್ನು ಹೆಚ್ಚಿಸುತ್ತದೆ.
- ವಿಶೇಷ ಸಂದರ್ಭವನ್ನು ಗುರುತಿಸಲು, ಜನರು ತಮ್ಮ ಶೈಲಿಯನ್ನು ಪ್ರತಿಬಿಂಬಿಸುವ ರಜಾದಿನದ ಬಟ್ಟೆಗಳನ್ನು ಆಯ್ಕೆ ಮಾಡಿಕೊಳ್ಳುತ್ತಾ ಶಾಪಿಂಗ್ ಆನಂದದಲ್ಲಿ ತೊಡಗುತ್ತಾರೆ. ಪ್ರೀತಿಪಾತ್ರರು ಸಣ್ಣ ಉಡುಗೊರೆಗಳು ಮತ್ತು ಸಿಹಿತಿಂಡಿಗಳನ್ನು ವಿನಿಮಯ ಮಾಡಿಕೊಳ್ಳುವಾಗ ಹಂಚಿಕೊಳ್ಳುವ ಮತ್ತು ಕಾಳಜಿ ವಹಿಸುವ ಸಮಯ ಇದು. ಕ್ರಿಸ್ಮಸ್ ಸಮಯದಲ್ಲಿ ಸುಲಭವಾಗಿ ಲಭ್ಯವಿರುವ ಸಾಂಟಾ ಕ್ಯಾಪ್ಗಳು ಮತ್ತು ಹಿಮಸಾರಂಗ ಹೆಡ್ಬ್ಯಾಂಡ್ಗಳು ಸ್ಥಳೀಯ ಮೋಡಿಗೆ ಸ್ಪರ್ಶ ನೀಡುತ್ತವೆ.
- ದೇಶಾದ್ಯಂತ ಮನೆಗಳಲ್ಲಿ ಪ್ರಿಯವಾದ ಕೇರಳ ಪ್ಲಮ್ ಕೇಕ್ ಅಥವಾ ಕ್ರಿಸ್ಮಸ್ ಹಣ್ಣಿನ ಕೇಕ್ನಂತಹ ಸಾಂಪ್ರದಾಯಿಕ ಖಾದ್ಯಗಳನ್ನು ಸವಿಯದೆ ಭಾರತದಲ್ಲಿ ಯಾವುದೇ ಕ್ರಿಸ್ಮಸ್ ಆಚರಣೆಯು ಪೂರ್ಣಗೊಳ್ಳುವುದಿಲ್ಲ.
- ಮಧ್ಯರಾತ್ರಿಯತ್ತ ಗಡಿಯಾರ ಘರ್ಜಿಸುತ್ತಿದ್ದಂತೆ, ಕ್ರಿಸ್ಮಸ್ ತಾತನ ನಿರೀಕ್ಷೆ ಹೆಚ್ಚಾಗುತ್ತದೆ. ಭಾರತದಲ್ಲಿ, ಅವರು ಕುದುರೆ ಎಳೆಯುವ ಬಂಡಿಯಲ್ಲಿ ಸ್ಟೈಲಿಶ್ ಆಗಿ ಉಡುಗೊರೆಗಳು ಮತ್ತು ಸದ್ಭಾವನೆಯನ್ನು ಹೊತ್ತುಕೊಂಡು ಬರುತ್ತಾರೆ, ಇದು ಹೃದಯಗಳನ್ನು ಬೆಚ್ಚಗಾಗಿಸುವ ಪಾಲಿಸಬೇಕಾದ ಸಂಪ್ರದಾಯವಾಗಿದೆ.
- ಗೋವಾ, ಅರುಣಾಚಲ ಪ್ರದೇಶ ಮತ್ತು ಅಸ್ಸಾಂನಂತಹ ರಾಜ್ಯಗಳು ಕ್ರಿಸ್ಮಸ್ ಆಚರಣೆಗಳೊಂದಿಗೆ ಜೀವಂತವಾಗಿವೆ. ಚರ್ಚ್ಗಳಲ್ಲಿ ಮಧ್ಯರಾತ್ರಿಯ ಪ್ರಾರ್ಥನೆಗಳು ಮೇಣದಬತ್ತಿ ಬೆಳಗುವ ಸಮಾರಂಭಗಳು ಮತ್ತು ಹೃತ್ಪೂರ್ವಕ ಪ್ರಾರ್ಥನೆಗಳೊಂದಿಗೆ ಪ್ರತಿಧ್ವನಿಸುತ್ತವೆ, ಪವಿತ್ರ ಮತ್ತು ಪ್ರಶಾಂತ ವಾತಾವರಣವನ್ನು ಸೃಷ್ಟಿಸುತ್ತವೆ.
- ಗೋವಾದ ಸುಂದರವಾದ ಕಡಲತೀರಗಳಲ್ಲಿ, ಸಂಗೀತ, ನೃತ್ಯ ಮತ್ತು ಸ್ಥಳೀಯ ಪಾಕಪದ್ಧತಿಗಳು ಕೇಂದ್ರ ಹಂತವನ್ನು ಪಡೆದುಕೊಳ್ಳುತ್ತವೆ, ಇದು ಕ್ರಿಸ್ಮಸ್ ಹಬ್ಬವನ್ನು ಉತ್ಸಾಹಭರಿತ ಸಂಗತಿಯನ್ನಾಗಿ ಮಾಡುತ್ತದೆ. ದೆಹಲಿ, ಮುಂಬೈ, ಬೆಂಗಳೂರು ಮತ್ತು ಚೆನ್ನೈನಂತಹ ಪ್ರಮುಖ ನಗರಗಳಲ್ಲಿ, ರಜಾದಿನದ ಉತ್ಸಾಹವು ಬೀದಿಗಳನ್ನು ಆವರಿಸುತ್ತದೆ, ವೈವಿಧ್ಯಮಯ ಅನುಭವಗಳನ್ನು ನೀಡುತ್ತದೆ.
- ಸಾಹಸವನ್ನು ಬಯಸುವವರಿಗೆ, ಕಲ್ಕಾ ಮತ್ತು ಶಿಮ್ಲಾ ನಡುವಿನ ಸುಂದರವಾದ ಆಟಿಕೆ ರೈಲು ಪ್ರಯಾಣವು ಹಿಮದಿಂದ ಆವೃತವಾದ ಪರ್ವತಗಳು, ಹಳ್ಳಿಗಾಡಿನ ಕ್ಯಾಬಿನ್ಗಳು ಮತ್ತು ಬ್ರಿಟಿಷ್ ಯುಗದ ಕಟ್ಟಡಗಳ ಉಸಿರುಕಟ್ಟುವ ನೋಟಗಳನ್ನು ನೀಡುತ್ತದೆ. ಭೂದೃಶ್ಯವು ಚಳಿಗಾಲದ ಅದ್ಭುತ ಲೋಕದಂತೆ ತೆರೆದುಕೊಳ್ಳುತ್ತದೆ.
- ಬಂದರು ನಗರಿ ಕೊಚ್ಚಿಯಲ್ಲಿ, ವರ್ಷಾಂತ್ಯದ ಉತ್ಸವಗಳು ಕಲಾ ಪ್ರದರ್ಶನಗಳು, ಸಾಂಪ್ರದಾಯಿಕ ಆಟಗಳು ಮತ್ತು ರೋಮಾಂಚಕ ಕ್ರೀಡಾಕೂಟಗಳೊಂದಿಗೆ ಜೀವಂತವಾಗಿರುತ್ತವೆ, ಇದು ವರ್ಷಕ್ಕೆ ರೋಮಾಂಚಕ ಅಂತ್ಯವನ್ನು ನೀಡುತ್ತದೆ.
- ಈ ಹಬ್ಬದ ಋತುವಿನ ಉದ್ದಕ್ಕೂ, ಗಾಳಿಯು ಸುಮಧುರವಾದ ಕ್ಯಾರೋಲ್ ಗೀತೆಗಳಿಂದ ತುಂಬಿರುತ್ತದೆ. ಸಾಹಿತ್ಯವು ವಿದೇಶಿಯಾಗಿದ್ದರೂ ಸಹ, ಉನ್ನತಿಗೇರಿಸುವ ಮಧುರಗಳು ಭಾಷಾ ತಡೆಗೋಡೆಯನ್ನು ನಿವಾರಿಸಿ, ಸಂತೋಷದಾಯಕ ವಾತಾವರಣವನ್ನು ಹೆಚ್ಚಿಸುತ್ತವೆ. ಗೋವಾ ಮತ್ತು ಬಾಂದ್ರಾದಂತಹ ಸ್ಥಳಗಳಲ್ಲಿ, ಸ್ಥಳೀಯರು ಮತ್ತು ಸಂದರ್ಶಕರು ಕ್ಯಾರೋಲಿಂಗ್ನ ಉತ್ಸಾಹಭರಿತ ಸಂಪ್ರದಾಯದಲ್ಲಿ ಸೇರುತ್ತಾರೆ, ರಜಾದಿನಗಳ ನಂತರವೂ ದೀರ್ಘಕಾಲ ಉಳಿಯುವ ಸಾಮರಸ್ಯದ ನೆನಪುಗಳನ್ನು ಸೃಷ್ಟಿಸುತ್ತಾರೆ.

## ಹಿನ್ನೆಲೆ

- ಆರಂಭಿಕ ಕ್ರಿಶ್ಚಿಯನ್ ಸಮುದಾಯವು ಯೇಸುವಿನ ಜನ್ಮ ದಿನಾಂಕವನ್ನು ನಿರ್ಧರಿಸುವುದು ಮತ್ತು ಅದರ ಪ್ರಾರ್ಥನಾ ಆಚರಣೆಯ ನಡುವೆ ವ್ಯತ್ಯಾಸವನ್ನು ತೋರಿಸಿತು. ಯೇಸುವಿನ ಜನ್ಮ ಆಚರಣೆಯು ಸ್ಥಾಪನೆಯಾಗಲು ಸಮಯ ಹಿಡಿಯಿತು. ಕುತೂಹಲಕಾರಿಯಾಗಿ, ಕ್ರಿಶ್ಚಿಯನ್ ಧರ್ಮದ ಮೊದಲ ಎರಡು ಶತಮಾನಗಳಲ್ಲಿ, ಯೇಸು ಮತ್ತು ಹುತಾತ್ಮರನ್ನು ಒಳಗೊಂಡಂತೆ ಹುಟ್ಟುಹಬ್ಬಗಳನ್ನು ಆಚರಿಸಲು ಪ್ರತಿರೋಧವಿತ್ತು. ಚರ್ಚ್ ಫಾದರ್ಗಳು ಪೇಗನ್ ಹುಟ್ಟುಹಬ್ಬದ ಪದ್ಧತಿಗಳನ್ನು ಪ್ರಶ್ನಿಸಿದರು, ಹುತಾತ್ಮರ ವಾರ್ಷಿಕೋತ್ಸವಗಳನ್ನು ಅವರ ನಿಜವಾದ 'ಜನ್ಮದಿನಗಳು' ಎಂದು ಒತ್ತಿ ಹೇಳಿದರು.
- ಡಿಸೆಂಬರ್ 25 ಯೇಸುವಿನ ಜನ್ಮ ದಿನಾಂಕದ ಮೂಲವು ಸ್ಪಷ್ಟವಾಗಿಲ್ಲ, ಹೊಸ ಒಡಂಬಡಿಕೆಯ ಸುಳಿವುಗಳಿಲ್ಲ. ಸೆಕ್ಸ್ಟಸ್ ಜೂಲಿಯಸ್ ಆಫ್ರಿಕಾನಸ್ ಇದನ್ನು 221 ರಲ್ಲಿ ಪ್ರಸ್ತಾಪಿಸಿದರು, ಅಂತಿಮವಾಗಿ ಸ್ವೀಕಾರವನ್ನು ಪಡೆದರು. ಒಂದು ಸಿದ್ಧಾಂತವು ಇದನ್ನು ರೋಮನ್ ಚಳಿಗಾಲದ ಅಯನ ಸಂಕ್ರಾಂತಿ ಆಚರಣೆಯಾದ 'ಡೈಸ್ ಸೋಲಿಸ್ ಇನ್ವಿಕ್ಟಿ ನಾಟಿ' ಗೆ ಸಂಪರ್ಕಿಸುತ್ತದೆ. ನಂತರ ಕ್ರಿಶ್ಚಿಯನ್ ಬರಹಗಾರರು ಸೂರ್ಯನ ಪುನರ್ಜನ್ಮವನ್ನು ಮಗನ ಜನನದೊಂದಿಗೆ ಜೋಡಿಸಿದರು, ಪೇಗನ್ ಪದ್ಧತಿಗಳನ್ನು ಅಳವಡಿಸಿಕೊಳ್ಳುವ ಬಗ್ಗೆ ಪ್ರಶ್ನೆಗಳನ್ನು ಎತ್ತಿದರು.
- ಇನ್ನೊಂದು ಸಿದ್ಧಾಂತವು ಡಿಸೆಂಬರ್ 25 ಅನ್ನು ಮಾರ್ಚ್ 25 ಕ್ಕೆ, ಯೇಸುವಿನ ಗರ್ಭಧಾರಣೆಯ ದಿನವನ್ನು ಸಂಪರ್ಕಿಸುತ್ತದೆ, ಇದು ವಸಂತ ವಿಷುವತ್ ಸಂಕ್ರಾಂತಿಯು ಸೃಷ್ಟಿಯೊಂದಿಗೆ ಸಂಬಂಧ ಹೊಂದಿದೆ. ಕ್ರಿಸ್ಮಸ್ನ ಔಪಚಾರಿಕ ಪ್ರಾರ್ಥನಾ ಆಚರಣೆಯು 9 ನೇ ಶತಮಾನದಲ್ಲಿ ಪ್ರಾರಂಭವಾಯಿತು, ಗುಡ್ ಫ್ರೈಡೇ ಅಥವಾ ಈಸ್ಟರ್ಗೆ ಎಂದಿಗೂ ಪ್ರತಿಸ್ಪರ್ಧಿಯಾಗಲಿಲ್ಲ. ರೋಮನ್ ಕ್ಯಾಥೊಲಿಕರು ಮಧ್ಯರಾತ್ರಿ ಕ್ರಿಸ್ಮಸ್ ಈವ್ ಮಾಸ್ ಅನ್ನು ಹೊಂದಿದ್ದಾರೆ, ಆದರೆ ಪ್ರೊಟೆಸ್ಟಂಟರು ಡಿಸೆಂಬರ್ 24 ರ ಕೊನೆಯಲ್ಲಿ ಕ್ಯಾಂಡಲ್ಲೈಟ್ ಸೇವೆಗಳನ್ನು ಆಯೋಜಿಸುತ್ತಾರೆ. ಕ್ಯಾರೋಲ್ಗಳನ್ನು ಮೋಕ್ಷ ಇತಿಹಾಸದ ವಾಚನಗಳೊಂದಿಗೆ ಸಂಯೋಜಿಸುವ 'ಪಾಠಗಳು ಮತ್ತು ಕ್ಯಾರೋಲ್ಗಳ ಸೇವೆಯು ಜನಪ್ರಿಯತೆಯನ್ನು ಗಳಿಸಿತು.
- ಕ್ರೈಸ್ತರು ಅಲ್ಪಸಂಖ್ಯಾತರಾಗಿರುವ ಪಾಶ್ಚಿಮಾತ್ಯೇತರ ದೇಶಗಳಲ್ಲಿ ಕ್ರಿಸ್ಮಸ್ ಜಾಗತಿಕವಾಗಿ ಹರಡಿ, ಧಾರ್ಮಿಕ ಸ್ವರೂಪವನ್ನು ಉಳಿಸಿಕೊಂಡಿದೆ. ದಕ್ಷಿಣ ಮತ್ತು ಮಧ್ಯ ಅಮೇರಿಕವು ವಿಶಿಷ್ಟ ಧಾರ್ಮಿಕ ಮತ್ತು ಜಾತ್ಯತೀತ ಸಂಪ್ರದಾಯಗಳನ್ನು ಹೊಂದಿದೆ. ಬ್ರೆಜಿಲ್ ಬೇಸಿಗೆ ಕ್ರಿಸ್ಮಸ್ ಅನ್ನು ಪಿಕ್ನಿಕ್ ಮತ್ತು ಪಟಾಕಿಗಳೊಂದಿಗೆ ಆಚರಿಸುತ್ತದೆ. ಭಾರತದಲ್ಲಿ, ಕೆಲವರು ನಿತ್ಯಹರಿದ್ವರ್ಣ ಮರಗಳನ್ನು ಮಾವು ಅಥವಾ ಬಿದಿರಿನ ಮರಗಳಿಂದ ಬದಲಾಯಿಸುತ್ತಾರೆ ಮತ್ತು ಮನೆಗಳನ್ನು ಮಾವಿನ ಎಲೆಗಳು ಮತ್ತು ಕಾಗದದ ನಕ್ಷತ್ರಗಳಿಂದ ಅಲಂಕರಿಸುತ್ತಾರೆ. ಜಪಾನ್ ಧಾರ್ಮಿಕ ಅಂಶಗಳ ಮೇಲೆ ಕಡಿಮೆ ಗಮನ ಹರಿಸದೆ ಮರಗಳು ಮತ್ತು ಹಾಡುಗಳಂತಹ ಜಾತ್ಯತೀತ ಅಂಶಗಳನ್ನು ಅಳವಡಿಸಿಕೊಳ್ಳುತ್ತದೆ.




ಓಂ



### ಭಾರತದ ಶ್ರೇಷ್ಠ ಗಣಿತ ಪ್ರತಿಭೆ

# ಶ್ರೀನಿವಾಸ ರಾಮಾನುಜನ್

ಗಣಿತ ಕಬ್ಬಿಣದ ಕಡಲೆ ಎಂಬುವವರಿಗೆ ರಾಮನುಜನ್ ಹೆಸರೇ ಪ್ರೇರಣಾ ಶಕ್ತಿ ಭಾರತದ ಪ್ರಸಿದ್ಧ ಗಣಿತಜ್ಞರು, ಸಣ್ಣ ವಯಸ್ಸಿನಿಂದಲೇ ಅಸಾಧಾರಣ ಪ್ರತಿಭೆ ತೋರಿದ ರಾಮಾನುಜನ್ ವಿಶ್ವವಿದ್ಯಾಲಯದಲ್ಲಿ ಸಾಂಪ್ರದಾಯಿಕ ಶಿಕ್ಷಣ ಪಡೆಯದ ಸ್ವ-ಶಿಕ್ಷಕ ಗಣಿತಜ್ಞರು ಆಗಿದ್ದು, ಮುಖ್ಯವಾಗಿ ಸಂಖ್ಯಾಶಾಸ್ತ್ರದಲ್ಲಿ ಸಂಶೋಧನೆ ನಡೆಸಿದ ರಾಮಾನುಜನ್ ಅನೇಕ ಸಂಕಲನ ಸೂತ್ರಗಳನ್ನು ಪ್ರತಿಪಾದಿಸಿದ್ದಕ್ಕಾಗಿ ವಿಶೇಷವಾಗಿ ಪ್ರಸಿದ್ಧರು.

ಇಂದಿನ ಮದ್ರಾಸ್ ಪ್ರಾಂತ್ಯದ (ಈಗಿನ ತಮಿಳುನಾಡಿನ) ಕೊಯಂಬತ್ತೂರು ಜಿಲ್ಲೆಯ ಈರೋಡಿನಲ್ಲಿ 22ನೇ ಡಿಸೆಂಬರ್ 1877 ರಂದು ಸರ್ವಜಿತ್ ಸಂವತ್ಸರದ ಮಾರ್ಗಶಿರ ಶುಕ್ಲ ನವಮಿಯಂದು ತಾಯಿಯ ತವರು ಮನೆಯಲ್ಲಿ ಜನಿಸಿದರು. ಇವರ ತಂದೆ ಶ್ರೀನಿವಾಸ ಅಯ್ಯಂಗಾರ್ ತಾಯಿ ಕೋಮಲತ್ತಮ್ಮಾಳ್ ಆರ್ಥಿಕವಾಗಿ ಅಷ್ಟು ಸದೃಢವಲ್ಲದ ಮಧ್ಯಮ ವರ್ಗದ ಶ್ರೀವೈಷ್ಣವ ಕುಟುಂಬಕ್ಕೆ ಸೇರಿದವರು. ಇವರ ಮೂವರು ಮಕ್ಕಳಲ್ಲಿ ರಾಮಾನುಜನ್‌ರೇ ಜ್ಯೇಷ್ಠ ಪುತ್ರ ಲಕ್ಷ್ಮೀನರಸಿಂಹನ್ ಮತ್ತು ತಿರುನಾರಾಯಣನ್ ಎಂಬ ಇಬ್ಬರೂ ಇವರ ತಮ್ಮಂದಿರು.

ವಿಶ್ವವಿಖ್ಯಾತ ಗಣಿತ ಪ್ರತಿಭೆ ಶ್ರೀನಿವಾಸ ಅಯ್ಯಂಗಾರ್ ರಾಮಾನುಜನ್‌ರವರ 125ನೇ ಜನ್ಮ ವರ್ಷವಾದ 2012ನ್ನು ಭಾರತ ಸರ್ಕಾರ 'ರಾಷ್ಟ್ರೀಯ ಗಣಿತ ವರ್ಷ ಎಂದು ಘೋಷಿಸಿದೆ'. ಇದು ನಿಜಕ್ಕೂ ಮಹತ್ವಪೂರ್ಣವಾಗಿದ್ದು, ರಾಷ್ಟ್ರದಾದ್ಯಂತ ಗಣಿತವನ್ನು ಜನಸಮುದಾಯದಲ್ಲಿ ಜನಪ್ರಿಯಗೊಳಿಸಲು ಹಾಗೂ ರಾಮಾನುಜನ್ ಅವರ ಜೀವನ ಮತ್ತು ಕೊಡುಗೆಗಳನ್ನು ಪರಿಚಯಿಸಲು ದೇಶ ಬಹಳ ಅರ್ಥಪೂರ್ಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು ಶ್ಲಾಘನೀಯ.

### ಗಣಿತಜ್ಞನ ಬಾಲ್ಯ :

ರಾಮಾನುಜನ್‌ರ ವಿದ್ಯಾಭ್ಯಾಸವು ಕುಂಭಕೋಣಂನ ಸರ್ಕಾರಿ ಪ್ರೌಢಶಾಲೆಯಲ್ಲೂ ಅನಂತರ ಅಲ್ಲಿಯ ಸರ್ಕಾರಿ ಕಾಲೇಜಿನಲ್ಲೂ ಕೈಗೊಂಡರು, ಇವರು ಚಿಕ್ಕಂದಿನಿಂದಲೂ ಬಹಳ ಮಿತಭಾಷಿಯೂ, ಅಂತರ್ಮುಖಿಯೂ ಆಗಿದ್ದು ತನ್ನ

ಸಹಪಾಠಿಗಳೊಂದಿಗೆ ಹೆಚ್ಚು ಸೇರುತ್ತಿರಲಿಲ್ಲ. ಒಮ್ಮೆ ರಾಮಾನುಜನ್ ಪ್ರಾಥಮಿಕ ತರಗತಿಯಲ್ಲಿದ್ದಾಗ ಉಪಾಧ್ಯಾಯರು 'ಯಾವುದೇ ಸಂಖ್ಯೆಯನ್ನು ಅದೇ ಸಂಖ್ಯೆಯಿಂದ ಭಾಗಿಸಿದಾಗ ಭಾಗಲಬ್ಧವು ಒಂದು ಆಗುತ್ತದೆ' ಎಂದು ವಿವರಿಸಿದಾಗ, ಪುಟ್ಟ ವಿದ್ಯಾರ್ಥಿ ರಾಮಾನುಜನ್ ತಕ್ಷಣ ನಿಂತು ಕೇಳಿದ ಪ್ರಶ್ನೆ 'ಹಾಗಾದರೆ ಸೊನ್ನೆಯನ್ನು ಸೊನ್ನೆಯಿಂದ ಭಾಗಿಸಿದರೆ ಏನು ಬರುತ್ತದೆ.' ತಬ್ಬಿಬ್ಬಾದ ಗುರುಗಳು ಏನೆಂದು ಉತ್ತರಿಸಿದ್ದು ಈಗ ಅಪ್ರಸ್ತುತ. ರಾಮಾನುಜನ್ ಕೇಳುತ್ತಿದ್ದ ಪ್ರಶ್ನೆಗಳು ಬಹಳ ಅರ್ಥಪೂರ್ಣವೂ ಉಚ್ಚಮಟ್ಟದ್ದಾಗಿದ್ದರೂ ಕೂಡ ಅವರು ಎಂದೂ ಕುಚೋದ್ಯ ಮಾಡಿದವರಲ್ಲ, ಇನ್ನೂ ಅಹಂಕಾರ ಎಂಬುದು ಅವರ ಬಳಿ ಎಂದೂ ಸುಳಿದಿದ್ದೇ ಇಲ್ಲ, ರಾಮಾನುಜನ್‌ರವರು ತಮ್ಮ ಜೀವನದಲ್ಲಿ ಅತ್ಯಂತ ಸರಳತೆಯ, ಮುಗ್ಧತೆಯ ಮತ್ತು ನಮ್ರತೆಯ ಸಾಕಾರಮೂರ್ತಿಯಾಗಿದ್ದರು.

ರಾಮಾನುಜನ್‌ರವರಿಗೆ ಬಹಳ ಸ್ಫೂರ್ತಿಯನ್ನಿತ್ತು ಆತನ ಗಣಿತ ಪ್ರತಿಭೆಯನ್ನು ವಿಕಾಸಗೊಳಿಸಿದ್ದು ಕಾರ್ ಎಂಬಾತನ 'ಸಿನೋಪ್ಸಿಸ್ ಆಫ್ ಪ್ಯೂರ್ ಮ್ಯಾಥಮೆಟಿಕ್ಸ್' ಎಂಬ ಗ್ರಂಥ, ಇದು ಗಣಿತ ಸೂತ್ರಗಳ ಹಾಗೂ ಕೇವಲ ಫಲಿತಾಂಶಗಳ ಒಂದು ಸಂಕಲನವೇ ಹೊರತು ಗಣಿತ ಶಾಸ್ತ್ರದ ಯಾವುದೇ ಒಂದು ಶಾಖೆಯನ್ನು ಶಾಸ್ತ್ರೀಯವಾಗಿ ವಿವೇಚಿಸಿ ಅಧ್ಯಯನ ಮಾಡುವ ಪಠ್ಯಪುಸ್ತಕವಾಗಲಿ, ಸಂಶೋಧನಾ ಗ್ರಂಥವಾಗಲಿ ಅಲ್ಲ, ಆದರೆ ಎಸ್.ಎಸ್.ಎಲ್.ಸಿಯಲ್ಲಿ ಓದುತ್ತಿದ್ದ ರಾಮಾನುಜನ್ ಆ ಪುಸ್ತಕವನ್ನು ಗಣಿತದ ಅದ್ಭುತವಾದ ತತ್ವಗಳ ಒಂದು ಮಹಾಗಣಿಯೆಂದೇ ಪರಿಗಣಿಸಿದರು. ಅದರಿಂದ ಒಂದೊಂದು ಫಲಿತಾಂಶವು ರಾಮಾನುಜನ್‌ರವರಿಗೆ ಒಂದೊಂದು ಸಂಶೋಧನಾ ಸಮಸ್ಯೆಯಾಗಿಯೇ ತೋರಿತು. ಅಂತಹ ಸಮಸ್ಯೆಗಳನ್ನು ಯಾರ ಸಹಾಯವೂ ಇಲ್ಲದೇ ತನ್ನ ಸ್ವಂತಿಕೆಯಿಂದಲೇ ಬಿಡಿಸುವ ತನಕ ಸಮಾಧಾನಗೊಳ್ಳದ ಹಠ ರಾಮಾನುಜನ್‌ರವರದ್ದು, ಈ ವಿಶೇಷವಾದ ಸಾಧನೆಯಲ್ಲಿ ಬೌದ್ಧಿಕ ಸಾಹಸವನ್ನು ಕೈಗೊಂಡ ರಾಮಾನುಜನ್ ತನ್ನದೇ ಆದ ಒಂದು ವಿಲಕ್ಷಣವಾದ ಸಂಶೋಧನಾ ಮಾರ್ಗವನ್ನು ರೂಪಿಸಿಕೊಳ್ಳಬೇಕಾಯಿತು. ಪ್ರತಿಭೆಯ ಈ ಘಟ್ಟದಲ್ಲಿ ರಾಮಾನುಜನ್‌ರವರು ಎಸ್.ಎಸ್.ಎಲ್.ಸಿಯಲ್ಲಿ ಓದುತ್ತಿದ್ದ ಒಬ್ಬ ಓರ್ವ ಬಡ ವಿದ್ಯಾರ್ಥಿ ಎಂಬುದನ್ನು ನಾವು ಮರೆಯಬಾರದು.

ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ವೇಳೆಗಾಗಲೇ 1903 ತನ್ನದೇ ಆದ ರೀತಿಯಲ್ಲಿ ಪರಿಶ್ರಮ ಹಾಗೂ ಪರಿಣಿತಗಳಿಂದ ಮಾಯಾಚೌಕ (Magic Squares) ರೇಖಾ ಗಣಿತದ ಕ್ಲಿಷ್ಟ ಸಮಸ್ಯೆಗಳು, ಬೀಜಗಣಿತದ ವಿಧಾನಗಳು, ಕಲನಶಾಸ್ತ್ರ (Calculus) ಗಣಿತ ವಿಶ್ಲೇಷಣಾ ಶಾಸ್ತ್ರ (Analysis) ಮುಂತಾದ ಕ್ಷೇತ್ರಗಳಲ್ಲಿ ಆಸಕ್ತಿಯನ್ನು ರಾಮಾನುಜನ್ ಬೆಳೆಸಿಕೊಂಡಿದ್ದರು. ಅನಂತರ 1904 ರಲ್ಲಿ ಕುಂಭಕೋಣಂನ ಸರ್ಕಾರಿ ಕಾಲೇಜಿನಲ್ಲಿ ತನ್ನ ವಿದ್ಯಾಭ್ಯಾಸವನ್ನು ಮುಂದುವರಿಸಿದ ರಾಮಾನುಜನ್ ಗಣಿತ ಮತ್ತು ಇಂಗ್ಲೀಷ್ ವಿಷಯಗಳಲ್ಲಿ ಅತಿ ಹೆಚ್ಚು ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗೆ ಮೀಸಲಾಗಿದ್ದ 'ಸುಬ್ರಹ್ಮಣ್ಯಂ ಸ್ಕಾಲರ್ಷಿಪ್' ಗಳಿಸಿಕೊಂಡರು, ಇದರಿಂದಾಗಿ ತನ್ನ ಹೊಟ್ಟೆ, ಬಟ್ಟೆ ಮತ್ತು ಪುಸ್ತಕಗಳ ಖರ್ಚನ್ನು ನಿರ್ವಹಿಸಲು ಬಹಳ ಮಟ್ಟಿಗೆ ಸಹಾಯವಾಯಿತು. ಆದರೆ ತನ್ನಲ್ಲಿದ್ದ ಆಸಕ್ತಿಯನ್ನು ಏಕೈಕ ವಿಷಯದತ್ತ ಅದು ಆತನ ತರಗತಿಯ ಮಟ್ಟಕ್ಕಿಂತ ಬಹಳ ಉನ್ನತಸ್ತರದ ಗಣಿತದತ್ತ ಕೇಂದ್ರೀಕರಿಸಿದ ಫಲವಾಗಿ ಇತರ ವಿಷಯಗಳಲ್ಲಿ ಸಾಕಷ್ಟು ಆಸಕ್ತಿಯನ್ನು ತೋರದೆ ಎಫ್.ಎ (ಈಗಿನ ಪಿ.ಯು.ಸಿ)ಯಲ್ಲಿ ಅನುತ್ತೀರ್ಣರಾದರು.

ರಾಮಾನುಜನ್‌ಗೆ 1909 ರಲ್ಲಿ ಕೇವಲ 9 ವರ್ಷಗಳ ಪುಟ್ಟ ಬಾಲಕಿಯಾದ ಜಾನಕಿಯೊಂದಿಗೆ ವಿವಾಹವಾಯಿತು. ಆರ್ಥಿಕ ಪರಿಸ್ಥಿತಿ ಬಹಳ ಹದಗೆಟ್ಟು ಹೊಟ್ಟೆಪಾಡಿಗಾಗಿ ಯಾವ ಕೆಲಸವೂ ಸಿಗದಿದ್ದರೂ ರಾಮಾನುಜನ್ ಸತತವಾಗಿ ಉಚ್ಚಮಟ್ಟದ ಗಣಿತ ಸಂಶೋಧನೆಯಲ್ಲೇ ತೊಡಗಿ ತಾನು ಸಾಧಿಸಿದ ಫಲಿತಾಂಶಗಳನ್ನು ತನ್ನ ಒಂದು ನೋಟ್ ಪುಸ್ತಕದಲ್ಲಿ ಬರೆದಿಟ್ಟುಕೊಳ್ಳಲಾರಂಭಿಸಿದರು.

ದಕ್ಷಿಣ ಆರ್ಕಾಟ್ ಜಿಲ್ಲೆಯ ತಿರುಕೊಯಿಲೂರಿನಲ್ಲಿ ಡೆಪ್ಯೂಟಿ ಕಲೆಕ್ಟರ್ ಆಗಿದ್ದ ವಿ.ರಾಮಸ್ವಾಮಿ ಅಯ್ಯರ್ ಹಾಗೂ ರಾಮಾನುಜನ್‌ನ ಪ್ರತಿಭೆಯನ್ನು ಈಗಾಗಲೇ ತಿಳಿದುಕೊಂಡಿದ್ದ ಕುಂಭಕೋಣಂನ ಕಾಲೇಜಿನ ಮುಖ್ಯಸ್ಥರು ಆನಂತರ ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನ ಗಣಿತ ಪ್ರಾಧ್ಯಾಪಕರೂ ಆಗಿದ್ದ ಪ್ರೊ.ಪಿ.ವಿ.ಶೇಷು ಅಯ್ಯರ್ ಇವರುಗಳ

ಸಹಾಯದಿಂದ ರಾಮಾನುಜನ್‌ಗೆ ಅಕೌಂಟೆಂಟ್ ಜನರಲ್‌ರವರ ಕಛೇರಿಯಲ್ಲಿ ಒಂದು ಹಂಗಾಮಿ ಗುಮಾಸ್ತನ ಕೆಲಸವು ದೊರೆಯಿತು. ಹಂಗಾಮಿ ಗುಮಾಸ್ತಗಿರಿ ಮುಗಿದ ನಂತರ ರಾಮಾನುಜನ್ ಪುನಃ ನಿರುದ್ಯೋಗಿ ಆದರೂ ಆತನ ಗಣಿತ ಸಂಶೋಧನೆ ಸತತವಾಗಿ ನಡೆಯುತ್ತಲೇ ಇತ್ತು.

ರಾಮಾನುಜನ್ ತನ್ನ ಹಳೆಯ ಮಿತ್ರರಾದ ಸಿ.ವಿ.ರಾಜಗೋಪಾಲಾಚಾರಿ ಹಾಗೂ ಹಿತೈಷಿ ಪ್ರಾಧ್ಯಾಪಕರಾದ ಶೇಷು ಅಯ್ಯರ್ ಇವರುಗಳ ಸಲಹೆಯಂತೆ ಮಿತ್ರ ಕೃಷ್ಣರಾವ್ ಮೂಲಕ ನೆಲ್ಲೂರು ಜಿಲ್ಲೆಯ ಕಲೆಕ್ಟರ್ ಆಗಿದ್ದ ದಿವಾನ್ ಬಹದ್ದೂರ್ ಆರ್.ರಾಮಚಂದ್ರರಾವ್ ಅವರನ್ನು ಭೇಟಿಯಾದರು. ರಾಯರು ಸ್ವತಃ ಗಣಿತದಲ್ಲಿ ಪರಿಶ್ರಮವನ್ನು ಹೊಂದಿದ್ದು ಆಗ ಇಂಡಿಯನ್ ಮ್ಯಾಥಮೆಟಿಕಲ್ ಸೊಸೈಟಿಯ ಅಧ್ಯಕ್ಷರಾಗಿದ್ದರು. ಇವರಿಗೆ ರಾಮಾನುಜನ್‌ರವರು ತನ್ನ ಕೆಲವು ಸರಳವಾದ ಫಲಿತಾಂಶಗಳನ್ನು ತೋರಿಸಿದರು. ರಾಮಾನುಜನ್ ಒಬ್ಬ ವಿಲಕ್ಷಣ ಪ್ರತಿಭಾವಂತ ಮೇಧಾವಿ ಎಂದು ಮನಗಂಡರು. ಅವರನ್ನು ರಾಮಾನುಜನ್ ಹಂತಹಂತವಾಗಿ Elliptic Integralls, Hyper Geometric Series, Divergent Serie ಮುಂತಾದವುಗಳ ಒಂದು ಅದ್ಭುತವಾದ ಗಣಿತ ಲೋಕಕ್ಕೆ ಕೊಂಡೊಯ್ದರಂತೆ ಇವುಗಳಿಂದ ಪೂರ್ತಿ ಮನಸೋತ ದಿವಾನ್ ಬಹದ್ದೂರ್ ರಾಮಚಂದ್ರರಾಯರು ರಾಮಾನುಜನ್‌ಗೆ ನಿನಗೆ ನನ್ನಿಂದ ಏನು ಸಹಾಯ ಬೇಕಾಗಿದೆ? ಎಂದು ಕೇಳಿದರಂತೆ ಅದಕ್ಕೆ ರಾಮಾನುಜನ್ ಕೊಟ್ಟ ನೇರ ಸರಳ ಉತ್ತರ 'ನನ್ನ ಗಣಿತ ಸಂಶೋಧನೆಯನ್ನು ಮುಂದುವರಿಸಿಕೊಂಡು ಹೋಗುವಷ್ಟರ ಮಟ್ಟಿಗೆ ಬದುಕಿಕೊಂಡಿರಲು ಅನ್ನ ಸಹಾಯ ಬೇಕು ಎಂದರಂತೆ'! ರಾಮಚಂದ್ರರಾಯರ ಔದಾರ್ಯದಿಂದ 1911–12ರ ಕೆಲವು ತಿಂಗಳುಗಳ ಕಾಲ ತಾತ್ಕಾಲಿಕ ಪರಿಹಾರ ದೊರೆಯಿತು. ಈ ಸಮಯದಲ್ಲೇ 'ಜರ್ನಲ್ ಆಫ್ ದಿ ಇಂಡಿಯನ್ ಮ್ಯಾಥಮ್ಯಾಟಿಕಲ್ ಸೊಸೈಟಿ' ಎಂಬ ಸಂಶೋಧನಾ ನಿಯತಕಾಲಿಕಕ್ಕೆ ತಮ್ಮ ಮೊಟ್ಟ ಮೊದಲ ಕೊಡುಗೆಯನ್ನು ರಾಮಾನುಜನ್ ಕಳುಹಿಸಿದರು. ಆಮೇಲೆ ಆಗಿಂದಾಗ್ಗೆ ಒಂದಾದ ಮೇಲೊಂದರಂತೆ ಅನೇಕ ಪ್ರಮುಖ ಫಲಿತಾಂಶಗಳನ್ನು, ಸಮಸ್ಯೆಗಳನ್ನು ಹಾಗೂ ಉತ್ತರಗಳನ್ನು ಕಳುಹಿಸುತ್ತಿದ್ದರು ಈ ಎಲ್ಲವೂ ಪ್ರಕಟಣೆಯಾದವು.

ಭಾರತದ ಕೆಲವು ಸಂಶೋಧನಾ ಪತ್ರಿಕೆಗಳಲ್ಲಿ ತಮ್ಮ ಸಂಶೋಧನೆಗಳನ್ನು ಪ್ರಕಟಿಸಿದ ನಂತರ ಯೂರೋಪ್‌ನ ಕೆಲವು ಗಣಿತಜ್ಞರಲ್ಲಿ ಇವರ ಬಗ್ಗೆ ಆಸಕ್ತಿ ಕೆರಳಿಸಿತು. 1913 ರ ಜನವರಿ 16 ರಂದು ಇಂಗ್ಲೆಂಡ್‌ನ ಪ್ರಸಿದ್ಧ ಗಣಿತಜ್ಞರಾಗಿದ್ದ ಪ್ರೊ.ಜಿ.ಹೆಚ್.ಹಾರ್ಡಿರವರಿಗೆ ರಾಮಾನುಜನ್ ಬರೆದ ಪತ್ರದಲ್ಲಿ ಅನೇಕ ಸಿದ್ಧಾಂತಗಳನ್ನು ಮಂಡಿಸಿದ್ದರು. ಮೊದಲಿಗೆ ಸ್ವಲ್ಪ ಅಪನಂಬಿಕೆ ತೋರಿಸಿದರು. ಹಾರ್ಡಿ ಬೇಗನೇ ಅವರ ಪ್ರತಿಭೆಯನ್ನು ಮನಗಂಡು ಇಂಗ್ಲೆಂಡ್‌ಗೆ ಬರುವಂತೆ ಆಹ್ವಾನವಿತ್ತರು.

ಮದ್ರಾಸ್ ವಿಶ್ವವಿದ್ಯಾಲಯವು ರಾಮಾನುಜನ್‌ರವರಿಗೆ ವರ್ಷಕ್ಕೆ 250 ಪೌಂಡ್‌ಗಳಂತೆ ಎರಡು ವರ್ಷಗಳ ವೇತನವನ್ನು ಹಾಗೂ ಇಂಗ್ಲೆಂಡ್‌ಗೆ ಹೋಗಲು ಹಡಗಿನ ಖರ್ಚನ್ನು ಮಂಜೂರು ಮಾಡಿತು. ಆ ವೇತನದಲ್ಲಿ ತಿಂಗಳಿಗೆ 60 ರೂಪಾಯಿಗಳನ್ನು ಕುಂಭಕೋಣಂನಲ್ಲಿದ್ದ ತನ್ನ ವೃದ್ಧ ತಾಯಿಯವರಿಗೆ ಕೊಡಬೇಕೆಂದು ವ್ಯವಸ್ಥೆ ಮಾಡಿ, ಹಾರ್ಡಿಯವರ ಸಹೋದ್ಯೋಗಿಯಾಗಿದ್ದ ಪ್ರೊ. ಇ.ಎಸ್.ನೆವಿಲ್ಲೆ ಅವರ ಜೊತೆಯಲ್ಲಿ ಮಾರ್ಚ್. 17, 1914ರಂದು ರಾಮಾನುಜನ್ ಇಂಗ್ಲೆಂಡ್‌ನತ್ತ ಹಡಗಿನಲ್ಲಿ ಪ್ರಯಾಣ ಬೆಳೆಸಿದರು.

ಮಡಿವಂತಿಕೆ ಹಾಗೂ ಶಾಖಾಹಾರದ ಅಭ್ಯಾಸದಿಂದ ಬಹಳ ಉಸಿರುಗಟ್ಟುವ ಸನ್ನಿವೇಶವಿದ್ದಾಗ್ಯೂ ಈ ಕಷ್ಟಗಳಿಂದ ವಿಚಲಿತರಾಗದೆ ಕೇವಲ ತಮ್ಮ ಸಂಶೋಧನೆಯ ಮೇಲೆ ಮಾತ್ರ ಕೇಂದ್ರೀಕರಿಸಿ, ತಾವು ಕೇಂಬ್ರಿಡ್ಜ್‌ನಲ್ಲಿದ್ದ ಐದು ವರ್ಷಗಳ ಕಾಲ (1914–1919) ಬಹಳ ವಿಫುಲವಾದ, ಗಾಢವಾದ ಮತ್ತು ಅತ್ಯದ್ಭುತವಾದ ಗಣಿತ ಸಾಧನೆಯನ್ನು ಮಾಡಿದ ಹಿರಿಮೆ ರಾಮಾನುಜನ್ ಅವರದ್ದು.

ಹಾರ್ಡಿ ಮತ್ತು ರಾಮಾನುಜನ್ ಸೇರಿ ಹತ್ತು ಹಲವು ಸಂಶೋಧನೆಗಳನ್ನು ಮಂಡಿಸಿದರು. ಹಲವಾರು ವರ್ಷಗಳ ನಂತರ ಸಂದರ್ಶನವೊಂದರಲ್ಲಿ ಹಾರ್ಡಿ ತಮ್ಮ ಗಣಿತ ಜೀವನದ ಎಲ್ಲಕ್ಕಿಂತ ಮುಖ್ಯ ಸಾಧನೆಯೆಂದರೆ ರಾಮಾನುಜನ್ ರವರನ್ನು ಬೆಳಕಿಗೆ ತಂದದ್ದು ಎಂದು ಬಹಳ ಹೆಮ್ಮೆಯಿಂದ ಹೇಳಿಕೊಂಡರು.

ರಾಮಾನುಜನ್‌ರವರ ಅತ್ಯುತ್ಕೃಷ್ಟವಾದ ಸಂಶೋಧನೆಗಳನ್ನು ಮೆಚ್ಚಿ ಜಗದ್ವಿಖ್ಯಾತವಾದ ಲಂಡನ್ನಿನ ರಾಯಲ್ ಸೊಸೈಟಿಯು 1918 ಫೆಬ್ರವರಿ 28ರಂದು 'F.R.S' (ಫೆಲೋ ಆಫ್ ರಾಯಲ್ ಸೊಸೈಟಿ) ಎಂಬ ತನ್ನ ಅತ್ಯುನ್ನತ ಪ್ರಶಸ್ತಿಯನ್ನು ಕೊಟ್ಟು ಅವರನ್ನು ಗೌರವಿಸಿತು. ಆಗ ರಾಮಾನುಜನ್‌ರವರಿಗೆ ಕೇವಲ 30 ವರ್ಷಗಳು.

ಈ ಮೊದಲೇ 1916 ಮಾರ್ಚಿಯಲ್ಲಿ ಕೇಂಬ್ರಿಡ್ಜ್ ವಿಶ್ವವಿದ್ಯಾಲಯವು ರಾಮಾನುಜನ್‌ಗೆ ಪ್ರತ್ಯೇಕವಾಗಿ 'ಸಂಶೋಧನೆಯ ಮೂಲಕ' ಬಿ.ಎ ಪದವಿಯನ್ನು ಕೊಟ್ಟಿತು.

ತಮ್ಮ 'F.R.S' ಪ್ರಶಸ್ತಿಯಿಂದ ಇನ್ನೂ ಹೆಚ್ಚು ಸ್ಫೂರ್ತಿಗೊಂಡು ಸಂಪೂರ್ಣವಾಗಿ 'ಗಣಿತ ಜೀವಿಯೇ' ಆಗಿಬಿಟ್ಟರು. ರಾಮಾನುಜನ್ ಅವರ ಗಣಿತದ ಕಮ್ಮಟದಿಂದ ಹೊರಬರುತ್ತಿದ್ದ ಅವ್ಯಾಹತ ಧಾರೆಯಿಂದ ಅಸಂಖ್ಯಾತ ಕಣಗಳಿಂದಲೇ ಜೀವಿಸುವ 'ಗಣಿತ ಕಣಾದರೇ' ಆದರು.

ಜೀವನವಿಡೀ ಆರೋಗ್ಯದ ತೊಂದರೆಗಳಿಂದ ಬಾಧಿತರಾಗಿದ್ದ ರಾಮಾನುಜನ್ ಅವರ ಆರೋಗ್ಯ ಲಂಡನ್ನಿನಲ್ಲಿ ಮತ್ತಷ್ಟು ಹದಗೆಟ್ಟಿತು. ಅಲ್ಲಿ ಸಸ್ಯಾಹಾರ ಸುಲಭವಾಗಿ ಸಿಗದೇ ಇದ್ದದ್ದು ಇದಕ್ಕೆ ಒಂದು ಮುಖ್ಯ ಕಾರಣ, ಜೀವಸತ್ತ್ವಗಳ ಕೊರತೆ ಮತ್ತು ಕ್ಷಯ ರೋಗದಿಂದ ನರಳಿದ ರಾಮಾನುಜನ್ 1919ರಲ್ಲಿ ಭಾರತಕ್ಕೆ ಮರಳಿದರು. ರಾಮಾನುಜನ್‌ರ ದೇಹಸ್ಥಿತಿಯು ಇನ್ನೂ ಹೆಚ್ಚು ಹೆಚ್ಚು ಕೆಡಲಾರಂಭಿಸಿ ಅವರ ಶುಶ್ರೂಷೆಗಾಗಿ ಮಾಡಿದ ಎಲ್ಲಾ ಪ್ರಯತ್ನಗಳು ವಿಫಲವಾಗಿ ಕೊನೆಗೆ 1920ರ ಏಪ್ರಿಲ್ 26ರಂದು ಸೋಮವಾರ ರಾಮಾನುಜನ್‌ರವರ ದೇಹಾಂತ್ಯವಾಯಿತು. ಆಗ ಅವರಿಗೆ ಕೇವಲ 33 ವರ್ಷಗಳು. ಅವರ ಬಹಳ ಪ್ರೀತಿಪಾತ್ರರಾಗಿದ್ದ ವೃದ್ಧ ತಾಯಿ ಕೋಮಲತ್ತಮ್ಮಾಳ್ ಶೋಕ ತಪ್ತರಾದರು. ಕೇವಲ 20ವರ್ಷದ ನತದೃಷ್ಟ ಧರ್ಮಪತ್ನಿ ಜಾನಕಿಯಮ್ಮಾಳ್ ವಿಧವೆಯಾದರು.

ಅವರ ಪತ್ನಿ ಜಾನಕಿಯಮ್ಮಾಳ್ ಚೆನ್ನೈ ನಗರದ ಸಮೀಪವೇ ಇದ್ದು 94 ವರ್ಷಗಳ ಕಾಲ ಬದುಕಿದ್ದ ಅವರು 1994ರಲ್ಲಿ ನಿಧರಾದರು. ಹೀಗೆ ರಾಮಾನುಜನ್ ಎಂಬ ಜಗದ್ವಿಖ್ಯಾತವಾದ ಒಂದು ಅಪೂರ್ವ ಗಣಿತ ಪ್ರತಿಭೆಯ ದೀಪ ನಂದಿತು. ॐ


## ಸಂಪ್ರೀತಿ ಸಮೃದ್ಧಿ ಮಾಸ ಪತ್ರಿಕೆ

#66, ಸಂಪ್ರೀತಿ – ಸದನ, ಸರ್ಕಾರಿ ಆಸ್ಪತ್ರೆ ಪಕ್ಕದ ರಸ್ತೆ, ಮಾಗಡಿ ಟೌನ್, ಬೆಂಗಳೂರು ದಕ್ಷಿಣ ಜಿಲ್ಲೆ - 562 120

ದೂರವಾಣಿ : 8971608213. ಇ-ಮೇಲ್ : sampreethisamruddhi@gmail.com

## ಪತ್ರಿಕೆಯ ಚಂದಾವಿವರ

10 ವರ್ಷಕ್ಕೆ ರೂ. 2000/– (ಎರಡು ಸಾವಿರ ರೂಗಳು),
05 ವರ್ಷಕ್ಕೆ ರೂ. 1000/– (ಒಂದು ಸಾವಿರ ರೂಗಳು)
02 ವರ್ಷಕ್ಕೆ ರೂ. 500/– (ಐದು ನೂರು ರೂಗಳು)

ಚಂದಾ ಹಣವನ್ನು ಚೆಕ್ ಮೂಲಕ : Publisher Sampreethi Samruddhi monthly magazine,
ಅಥವಾ ಗೂಗಲ್ ಪೇ ಸಂಖ್ಯೆ : 98455 65696 ಮೂಲಕ ಸಂದಾಯ ಮಾಡಬಹುದು.
ಹೆಚ್ಚಿನ ವಿವರಗಳಿಗೆ ಈ ಸಂಖ್ಯೆಯನ್ನು ಸಂಪರ್ಕಿಸಿ : 8971608213

# ಸಮಯ ಕಲಿಸಿದ ಪಾಠ

ಕೆ.ಸಿ.ಶಿವಪ್ಪ

ಬದಕಿನಲ್ಲಿ ಏನೊಂದು ಕನಸುಗಳು, ಆಸೆ ಆಕಾಂಕ್ಷೆಗಳು? ಅವು ಆಕಾಶದಷ್ಟು ಎತ್ತರ! ಕೈಗೆಟುಕಲಾರದ್ದನ್ನು ಹಿಡಿದುಕೊಳ್ಳುವ ಎಲ್ಲಿಲ್ಲದ ಅತೀವ ಬಯಕೆ, ಅದನ್ನು ನಮ್ಮದನ್ನಾಗಿ ಮಾಡಿಕೊಳ್ಳುವ ಸಲುವಾಗಿ ಪಡುವ ಪರದಾಟ ಅದೆಷ್ಟು? ಅದೆಂತಹ ತುಯ್ದಾಟ, ತಿಕ್ಕಾಟ! ಅಬ್ಬರ, ಅನಿಶ್ಚಿತ! ಈ ಹುಚ್ಚು ಪಂದ್ಯದಲ್ಲಿ ಮನಮುರಿವ ಪ್ರಸಂಗ ಎನಿತೊ? ಗುರಿಮುಟ್ಟಲಾಗದೆ ಸೋತು ಬಸವಳಿದ ಕಾಲುಹೆಜ್ಜೆಗಳ ಎನಿತೊ?

ಈ ಸಮಸ್ಯೆ ವೈಯಕ್ತಿಕ ಸಾಧನೆಗೆ ಎಷ್ಟು ಅನ್ವತವೋ, ಆಪ್ತೇಷ್ಟರ ಒಳತಿಗಾಗಿ ನಾವು ಕೈಗೊಳ್ಳುವ ಕಾರ್ಯಸಾಧನೆಗೂ ಅಷ್ಟೇ ಅನ್ವಯಿಸುತ್ತದೆ. ಇನ್ನೊಬ್ಬ ವ್ಯಕ್ತಿಯ ಉನ್ನತಿ, ಪುರೋಭಿವೃದ್ಧಿಗಾಗಿ ನಾವು ತುಂಬ ಶ್ರಮಪಟ್ಟು, ಆಗಲಾರದ ಕಾರ್ಯವನ್ನು ಸುಮುಖವಾಗಿ ಕೈಗೂಡುವಂತೆ ಮಾಡುತ್ತೇವೆ. ಪಡಬಾರದ ತೊಂದರೆ ಸಹಿಸುತ್ತೇವೆ. ಯಾರ್ಯಾದೊ ಕೈಕಾಲು ಕಟ್ಟಿ ಕೊನೆಗೆ ಆ ಕೆಲಸ ಆಗುಮಾಡುತ್ತೇವೆ. ಊಟತಿಂಡಿ ಇಲ್ಲದೆ ಅಲೆದಾಡಿ, ವಿಶ್ರಾಂತಿ ಇಲ್ಲದೆ ಸತ್ತು ಸುಣ್ಣವಾಗುತ್ತೇವೆ. ಯಾರಿಗಾಗಿ ಇಷ್ಟೆಲ್ಲ ಕಷ್ಟಪಡುತೇವೊ, ಆ ವ್ಯಕ್ತಿ ನಂತರ ಕೃತಜ್ಞತಾಭಾವದಿಂದ ಕಿಂಚಿತ್ತಾದರೂ ನೆನಕೆ ಸಲ್ಲಿಸುವುದಿರಲಿ, ಏನೋ ಒಂದು ಬಗೆಯ ತಾತ್ಸಾರ ಮನೋಭಾವದಿಂದ ನಮ್ಮನ್ನು ಕಂಡಾಗ ಒಮ್ಮೆಲೇ ಮನಸ್ಸು ಮುದುಡಿಹೋಗುತ್ತದೆ, ನಮ್ಮೆಲ್ಲ ಭರವಸೆಗೆ ತಣ್ಣೀರೆರಚಿದಂತಾಗುತ್ತದೆ. ಎಲ್ಲಿಲ್ಲದ ನೋವು ನಮ್ಮನ್ನು ಆವರಿಸುತ್ತದೆ. ವಿಷಣ್ಣತೆ ಕಾಡುತ್ತದೆ. ಇಷ್ಟೇನೆ ಈ ಪ್ರಪಂಚ?–, ಇದೇನು ಈ ಮಾನವ್ಯವಹಾರ?, ಈ ತೆರನಾದ ಪ್ರಶ್ನೆಗಳ ಸರಮಾಲೆ ಒಂದರ ನಂತರ ಒಂದು ಬಂದು ನಮ್ಮನ್ನು ಮುತ್ತುತ್ತವೆ, ಕಳವಳಕ್ಕೆ ದಾರಿಮಾಡಿಕೊಡುತ್ತವೆ.

ಇಂತಹ ಅಧೀರ ಸಮಯದಲ್ಲಿ ನಾವು ರೊಚ್ಚಿಗೇಳಬಾರದು, ಮೈ ಪರಚಿಕೊಳ್ಳಬಾರದು. ಜಗತ್ತನ್ನು ನಿಂದಿಸಹೋಗಬಾರದು. ಸಿನಿತನ ಸುಳಿಯದಂತೆ ಜಾಗರೂಕತೆಯಿಂದ ನಮ್ಮನ್ನು ಕಾಯ್ದುಕೊಳ್ಳಬೇಕು. ಅದು ಕಷ್ಟ ಕೆಲಸ, ನಿಜ, ಆದರೆ, ಬೇರೆ ದಾರಿಯಾದರೂ ಏನಿದೆ? ಒಬ್ಬರಿಗೆ ಏನಾದರೂ ಉಪಕಾರವೆಸಗಿದರೆ, ಕೂಡಲೇ ಅದನ್ನು ಮರೆಯುವ ಪರಿಪಾಠ ನಮ್ಮದಾಗಬೇಕು, ಆ ಬಗೆಯ ಮನೋವೃತ್ತಿಯನ್ನು ಆದಷ್ಟು ಬೇಗ ರೂಢಿಸಿಕೊಳ್ಳಬೇಕು. ಆದರಿಂದ ಇತರರಿಗಿಂತ ನಮಗೇ ಹೆಚ್ಚು ಕ್ಷೇಮ. ಆದುದನ್ನು ಆಗಾಗಲೇ ಮರೆತುಬಿಡಬೇಕು. ಆಗ ನಾವು ಚಿಂತೆಗೆ ಈಡಾಗುವುದಿಲ್ಲ, ದೈಹಿಕವಾಗಿ ಬಳಲುವುದಿಲ್ಲ. ಆದುದನ್ನೇ ಕುರಿತು ಚಿಂತಿಸುವ ಒಣ ಹವ್ಯಾಸಕ್ಕೆ ಎಷ್ಟು ಬೇಗ ತಿಲಾಂಜಲಿ ಕೊಡುತ್ತೇವೋ, ಅಷ್ಟು ಒಳ್ಳೆಯದು ನಮಗೆ, Why brood when you can't find any solution to the problem? ಮರೆಯುವುದೊಂದೇ ಆ ಸಮಸ್ಯಗೆ ಸಮಾಧಾನ ಖಾಯಂ ಪರಿಹಾರ.

ಬದುಕಿನಲ್ಲಿ ಯಾವುದೂ ಸ್ಥಿರವಲ್ಲ, ಎಲ್ಲ ಸಂಚಾರಿ ಭಾವಗಳೆ, ನಿನ್ನ ಸರಿ ಎಂದದ್ದು, ಇಂದು ತಪ್ಪು, ನಿನ್ನ ನಲಿವಿಗೆ ಕಾರಣವಾದದ್ದು ಇಂದು ನೋವಿಗೆ ಮೂಲ. ಇಂದು ಕಿಚ್ಚಿನಲ್ಲಿ ಸುಟ್ಟು ಹೋದದ್ದು ನಾಳೆ ಬೆಳಕಾಗಿ ಮಿಂಚಬಹುದು. "ಬಾಳ ನೆಲೆಯ ಬಗೆಬಗೆಯ ಚಾವದಲ್ಲಿ– ಯಾರಿಗೆ ಯಾವಾಗ ಏನೇನು ಕಾದಿದೆಯೋ! ಇದನ್ನರಿತರಾರು? "ಯಾರಿಗೇತರಲಿ ಜೀವ ಅದುವೆ ಸವಿ, ಅವರಿಗದುವೆ ಹಬ್ಬ." "ಎಷ್ಟೆ ಇರಲಿ, ಅಷ್ಟೆ ಮಿಗಿಲು, ತಮ್ಮ ಕಿರಣ ತಮಗೆ ಹಗಲು, ಉಳಿದ ಬೆಳಕು ಕತ್ತಲು."

ಸಮಯ ನಮಗೆ ಕಲಿಸುವ ಪಾಠ ಅಪಾರ. ಕಲಿತವ ಜಾಣ , ಕಲಿಯದವ ಕೋಡಂಗಿ, ಒಂದೊಂದಕ್ಕೆ, ಅದರದಷ್ಟೇ ತೂಕ, ಅದಕ್ಕಿಂತ ಹೆಚ್ಚು ಮನ್ನಣೆ ಇತ್ತರೆ, ಆಗ ತಲೆನೋವು, ಮನಸ್ತಾಪದಿಂದ ನೂರೆಂಟು ಕಿರಿಕಿರಿ, ಇನ್ನೇನು ದಾರಿ ಕೊನೆಗೊಂಡಿತು ಎನ್ನುವಷ್ಟರಲ್ಲೇ ಕಿರುದಾರಿಯತ್ತ ಸಾಗುವ ಹುನ್ನಾರ ಆ ನಿಟ್ಟಿನಲ್ಲಿ ಕೆಲಸಮಯ ನಡೆದು, ನಂತರ ಇನ್ನೊಂದು ಹೊಸ ದಾರಿ, ಹೆದ್ದಾರಿ ಅರಸಬಹುದು. ಬಾಳಪಯಣದಲ್ಲಿ ಗೋಜು ಗೊಂದಲವಿಲ್ಲದೆ ನಿಶ್ಚಿಂತರಾಗಿರಬಹುದು. ಇಷ್ಟಾಗಿ, ನಮ್ಮ ಪಯಣದ ದೂರವಾದರೂ ಎಷ್ಟು? ಚಲಿಸುವ ಗಾಡಿ ಯಾವುದೋ ಒಂದು ನಿಲ್ದಾಣದಲ್ಲಿ ನಿಂತಾಗ, ನಾವು ಅನಿವಾರ್ಯವಾಗಿ ಇಳಿಯಲೇಬೇಕಾಗುತ್ತದೆ. ನಾವು ಕೊಂಡ ಟಿಕೇಟು ಅಲ್ಲಿಗೆ ಮುಕ್ತಾಯ. ಗಾಡಿ ನಿರಂತರವಾಗಿ ಚಲಿಸುತ್ತಲೇ ಇರುತ್ತದೆ. ಮತ್ತಾರೋ ಹತ್ತುತ್ತಾರೆ, ಇನ್ನಾರೋ ಇಳಿಯುತ್ತಾರೆ, ಇದು ಎಂದೆಂದೂ ಮುಗಿಯದ ಪಯಣ!. ॐ

**ಸಮೃದ್ಧಿ ಸುಜ್ಞಾನ**

ಮನಸ್ಸು ಪರಿಶುದ್ಧವಾದಾಗ ಅದೇ ನಮಗೆ ಗುರುವಾಗಿ ಮುಂದೆ ನಿಂತು ಎಲ್ಲವನ್ನು ಬೋಧಿಸುತ್ತದೆ.

ವಿವಿಧ ಕ್ಷೇತ್ರಗಳಲ್ಲಿ ಅತ್ಯುತ್ತಮ ಕೊಡುಗೆಗಳನ್ನು ಗುರುತಿಸುವ
ಪ್ರತಿಷ್ಠಿತ ಅಂತರರಾಷ್ಟ್ರೀಯ ಪ್ರಶಸ್ತಿ

# ನೊಬೆಲ್ ಪ್ರಶಸ್ತಿ




ನೊಬೆಲ್ ಪ್ರಶಸ್ತಿ, ಸ್ವೀಡಿಷ್ ಸಂಶೋಧಕ ಮತ್ತು ಕೈಗಾರಿಕೋದ್ಯಮಿ ಆ ಉದ್ದೇಶಕ್ಕಾಗಿ ನೀಡಿದ ನಿಧಿಯಿಂದ ವಾರ್ಷಿಕವಾಗಿ ನೀಡಲಾಗುವ ಯಾವುದೇ ಬಹುಮಾನಗಳು (1969 ರವರೆಗೆ ಐದು ಸಂಖ್ಯೆಯಲ್ಲಿದ್ದವು, ಆರನೇಯದನ್ನು ಸೇರಿಸಲಾಯಿತು).ಆಲ್ಫ್ರೆಡ್ ನೊಬೆಲ್ . ನೊಬೆಲ್ ಪ್ರಶಸ್ತಿಗಳನ್ನು ವಿಶ್ವದ ಬೌದ್ಧಿಕ ಸಾಧನೆಗಾಗಿ ನೀಡಲಾಗುವ ಅತ್ಯಂತ ಪ್ರತಿಷ್ಠಿತ ಪ್ರಶಸ್ತಿಗಳೆಂದು ವ್ಯಾಪಕವಾಗಿ ಪರಿಗಣಿಸಲಾಗಿದೆ.

1895 ರಲ್ಲಿ ಅವರು ಬರೆದ ವಿಲ್‌ನಲ್ಲಿ, ನೊಬೆಲ್ ತಮ್ಮ ಸಂಪತ್ತಿನ ಬಹುಭಾಗವನ್ನು "ಹಿಂದಿನ ವರ್ಷದಲ್ಲಿ, ಮಾನವಕುಲಕ್ಕೆ ಹೆಚ್ಚಿನ ಪ್ರಯೋಜನವನ್ನು ನೀಡಿದವರಿಗೆ" ಐದು ವಾರ್ಷಿಕ ಪ್ರಶಸ್ತಿಗಳನ್ನು ನೀಡಲು ನಿಧಿಯಾಗಿ ಮೀಸಲಿಡಬೇಕೆಂದು ಸೂಚಿಸಿದರು. ಅವರ ಇಚ್ಛೆಯಿಂದ ಸ್ಥಾಪಿಸಲಾದ ಈ ಬಹುಮಾನಗಳು ನೊಬೆಲ್ ಪ್ರಶಸ್ತಿಗಳಾಗಿವೆ. ಭೌತಶಾಸ್ತ್ರ, ನೊಬೆಲ್ ಪ್ರಶಸ್ತಿ, ರಸಾಯನಶಾಸ್ತ್ರ ನೊಬೆಲ್ ಪ್ರಶಸ್ತಿ, ಶರೀರಶಾಸ್ತ್ರ ಅಥವಾ ವೈದ್ಯಕೀಯ ನೊಬೆಲ್ ಪ್ರಶಸ್ತಿ, ಸಾಹಿತ್ಯ ನೊಬೆಲ್ ಪ್ರಶಸ್ತಿ, ಶಾಂತಿ ಪ್ರಶಸ್ತಿಗಳ ಮೊದಲ ವಿತರಣೆ ಡಿಸೆಂಬರ್ 10, 1901 ರಂದು ನಡೆಯಿತು, ಇದು ನೊಬೆಲ್ ಅವರ ಮರಣದ ಐದನೇ ವಾರ್ಷಿಕೋತ್ಸವವಾಗಿತ್ತು. ಹೆಚ್ಚುವರಿ ಪ್ರಶಸ್ತಿ, ಸ್ವೆರಿಜಸ್ ರಿಕ್ಸ್‌ಬ್ಯಾಂಕ್ ಪ್ರಶಸ್ತಿಆಲ್ಫ್ರೆಡ್ ನೊಬೆಲ್ ಅವರ ಸ್ಮರಣಾರ್ಥ ಆರ್ಥಿಕ ವಿಜ್ಞಾನಗಳನ್ನು 1968 ರಲ್ಲಿ ಬ್ಯಾಂಕ್ ಆಫ್ ಸ್ವೀಡನ್ ಸ್ಥಾಪಿಸಿತು ಮತ್ತು ಮೊದಲು 1969 ರಲ್ಲಿ ನೀಡಲಾಯಿತು. ತಾಂತ್ರಿಕವಾಗಿ ನೊಬೆಲ್ ಪ್ರಶಸ್ತಿಯಲ್ಲದಿದ್ದರೂ, ಇದನ್ನು ಪ್ರಶಸ್ತಿಯೊಂದಿಗೆ ಗುರುತಿಸಲಾಗುತ್ತದೆ, ಅದರ ವಿಜೇತರನ್ನು ನೊಬೆಲ್ ಪ್ರಶಸ್ತಿ ಪುರಸ್ಕೃತರೊಂದಿಗೆ ಘೋಷಿಸಲಾಗುತ್ತದೆ ಮತ್ತು ಆರ್ಥಿಕ ವಿಜ್ಞಾನದಲ್ಲಿ ಪ್ರಶಸ್ತಿಯನ್ನು ನೊಬೆಲ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ನೀಡಲಾಗುತ್ತದೆ.

ನೊಬೆಲ್ ಅವರ ಮರಣದ ನಂತರ, ನೊಬೆಲ್ ಫೌಂಡೇಶನ್ ಅನ್ನು ಅವರ ನಿಬಂಧನೆಗಳನ್ನು ಕಾರ್ಯಗತಗೊಳಿಸಲು ಸ್ಥಾಪಿಸಲಾಯಿತು ಅವರು ತಮ್ಮ ನಿಧಿಗಳನ್ನು ನಿರ್ವಹಿಸಲು ಸಿದ್ಧರಿದ್ದಾರೆ. ತಮ್ಮ ಉಯಿಲಿನಲ್ಲಿ, ಅವರು ನಾಲ್ಕು ವಿಭಿನ್ನ ಸಂಸ್ಥೆಗಳು – ಮೂರು ಸ್ವೀಡಿಷ್ ಮತ್ತು ಒಂದು ನಾರ್ವೇಜಿಯನ್ – ಬಹುಮಾನಗಳನ್ನು ನೀಡಬೇಕೆಂದು ಷರತ್ತು ವಿಧಿಸಿದ್ದರು. ಸ್ಟಾಕ್‌ಹೋಮ್‌ನಿಂದ, ದಿರಾಯಲ್ ಸ್ವೀಡಿಷ್ ಅಕಾಡೆಮಿ ಆಫ್ ಸೈನ್ಸಸ್ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಅರ್ಥಶಾಸ್ತ್ರಕ್ಕಾಗಿ ಪ್ರಶಸ್ತಿಗಳನ್ನು ನೀಡುತ್ತದೆ, ಕರೋಲಿನ್ಸ್ಕಾ ಸಂಸ್ಥೆಯು ಶರೀರಶಾಸ್ತ್ರ ಅಥವಾ ಔಷಧಕ್ಕಾಗಿ ಪ್ರಶಸ್ತಿಯನ್ನು ನೀಡುತ್ತದೆ, ಮತ್ತು ಸ್ವೀಡಿಷ್ ಅಕಾಡೆಮಿ ಸಾಹಿತ್ಯಕ್ಕಾಗಿ ಪ್ರಶಸ್ತಿಯನ್ನು ನೀಡುತ್ತದೆ. ದಿಓಸ್ಲೋದಲ್ಲಿರುವ ನಾರ್ವೇಜಿಯನ್ ನೊಬೆಲ್ ಸಮಿತಿಯು ಶಾಂತಿಗಾಗಿ ಪ್ರಶಸ್ತಿಯನ್ನು ನೀಡುತ್ತದೆ. ನೊಬೆಲ್ ಫೌಂಡೇಶನ್ ನಿಧಿಯ ಕಾನೂನುಬದ್ಧ ಮಾಲೀಕ ಮತ್ತು ಕ್ರಿಯಾತ್ಮಕ ನಿರ್ವಾಹಕರಾಗಿದ್ದು, ಬಹುಮಾನ ನೀಡುವ ಸಂಸ್ಥೆಗಳ ಜಂಟಿ ಆಡಳಿತ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತದೆ, ಆದರೆ ಇದು ಬಹುಮಾನ ಚರ್ಚೆಗಳು ಅಥವಾ ನಿರ್ಧಾರಗಳಿಗೆ ಸಂಬಂಧಿಸಿಲ್ಲ, ಇದು ನಾಲ್ಕು ಸಂಸ್ಥೆಗಳೊಂದಿಗೆ ಮಾತ್ರ ಉಳಿದಿದೆ.

**ಆಯ್ಕೆ ಪ್ರಕ್ರಿಯೆ**

ನೊಬೆಲ್ ಶಾಂತಿ ಪ್ರಶಸ್ತಿ ವಿಜೇತೆ ಲೇಮಾ ಗ್ಬೋವೀ ಶಾಂತಿಯನ್ನು ಹೇಗೆ ವ್ಯಾಖ್ಯಾನಿಸುತ್ತಾರೆ ಲೈಬೀರಿಯಾದಲ್ಲಿ ಮಹಿಳೆಯರ ಸುರಕ್ಷತೆ ಮತ್ತು ಹಕ್ಕುಗಳನ್ನು ಮುನ್ನಡೆಸಲು ಮಾಡಿದ ಕೆಲಸಕ್ಕಾಗಿ ಗ್ಬೋವೀ ಅವರಿಗೆ ನೊಬೆಲ್ ಶಾಂತಿ ಪ್ರಶಸ್ತಿಯನ್ನು ನೀಡಲಾಯಿತು.

ನೊಬೆಲ್ ಶಾಂತಿ ಪ್ರಶಸ್ತಿ ವಿಜೇತೆ ಲೇಮಾ ಗ್ಬೋವೀ ಅನ್ಯಾಯದ ವಿರುದ್ಧ ಹೋರಾಡಲು ಪ್ರೇರೇಪಿಸುವ ಅಂಶ ಲೈಬೀರಿಯಾದ ಅಂತರ್ಯುದ್ಧವನ್ನು ಕೊನೆಗೊಳಿಸಲು ನಾಯಕರ ಮೇಲೆ ಒತ್ತಡ ಹೇರಲು ಮಹಿಳೆಯರನ್ನು ಒಟ್ಟುಗೂಡಿಸುವಲ್ಲಿ ಗ್ಬೋವೀ ಹೆಸರುವಾಸಿಯಾಗಿದ್ದಾರೆ.

ನೊಬೆಲ್ ಪ್ರಶಸ್ತಿಯ ಘನತೆಯು ಬಹುಮಾನ ವಿಜೇತರ ಆಯ್ಕೆಗೆ ಸಂಬಂಧಿಸಿದ ಗಣನೀಯ ಸಂಶೋಧನೆಯಿಂದ ಉಂಟಾಗುತ್ತದೆ. ವಿಜೇತರನ್ನು ಅಕ್ಟೋಬರ್ ಮತ್ತು ನವೆಂಬರ್‌ನಲ್ಲಿ ಘೋಷಿಸಲಾಗಿದ್ದರೂ, ಆಯ್ಕೆ ಪ್ರಕ್ರಿಯೆಯು ಹಿಂದಿನ ವರ್ಷದ ಶರತ್ಕಾಲದ ಆರಂಭದಲ್ಲಿ ಪ್ರಾರಂಭವಾಗುತ್ತದೆ, ಆಗ ಬಹುಮಾನ ನೀಡುವ ಸಂಸ್ಥೆಗಳು 6,000 ಕ್ಕೂ ಹೆಚ್ಚು ವ್ಯಕ್ತಿಗಳನ್ನು ಬಹುಮಾನಗಳಿಗೆ ಅಭ್ಯರ್ಥಿಗಳನ್ನು ಪ್ರಸ್ತಾಪಿಸಲು ಅಥವಾ ನಾಮನಿರ್ದೇಶನ ಮಾಡಲು ಆಹ್ವಾನಿಸುತ್ತವೆ. ಪ್ರತಿ ಪ್ರಶಸ್ತಿಗೆ ಸುಮಾರು 1,000 ಜನರು ನಾಮನಿರ್ದೇಶನಗಳನ್ನು ಸಲ್ಲಿಸುತ್ತಾರೆ ಮತ್ತು ನಾಮನಿರ್ದೇಶಿತರ ಸಂಖ್ಯೆ ಸಾಮಾನ್ಯವಾಗಿ 100 ರಿಂದ 250 ರವರೆಗೆ ಇರುತ್ತದೆ. ನಾಮನಿರ್ದೇಶನ ಮಾಡುವವರಲ್ಲಿ ನೊಬೆಲ್ ಪ್ರಶಸ್ತಿ ವಿಜೇತರು, ಬಹುಮಾನ ನೀಡುವ ಸಂಸ್ಥೆಗಳ ಸದಸ್ಯರು, ಭೌತಶಾಸ್ತ್ರ, ರಸಾಯನಶಾಸ್ತ್ರ, ಅರ್ಥಶಾಸ್ತ್ರ ಮತ್ತು ಶರೀರಶಾಸ್ತ್ರ ಅಥವಾ ವೈದ್ಯಕೀಯ ಕ್ಷೇತ್ರಗಳಲ್ಲಿ ಸಕ್ರಿಯವಾಗಿರುವ ವಿದ್ವಾಂಸರು; ಮತ್ತು ವಿವಿಧ ವಿಶ್ವವಿದ್ಯಾಲಯಗಳು ಮತ್ತು ಕಲಿತ ಅಕಾಡೆಮಿಗಳ ಅಧಿಕಾರಿಗಳು ಮತ್ತು ಸದಸ್ಯರು ಸೇರಿದ್ದಾರೆ. ಪ್ರತಿಕ್ರಿಯಿಸುವವರು ತಮ್ಮ ಅಭ್ಯರ್ಥಿಗಳ ಅರ್ಹತೆಯನ್ನು ವಿವರಿಸುವ ಲಿಖಿತ ಪ್ರಸ್ತಾವನೆಯನ್ನು ಒದಗಿಸಬೇಕು. ಸ್ವಯಂ ನಾಮನಿರ್ದೇಶನವು ನಾಮನಿರ್ದೇಶಿತರನ್ನು ಸ್ವಯಂಚಾಲಿತವಾಗಿ ಅನರ್ಹಗೊಳಿಸುತ್ತದೆ. ಪ್ರಶಸ್ತಿ ಪ್ರಸ್ತಾವನೆಗಳನ್ನು ಪ್ರಶಸ್ತಿ ವರ್ಷದ ಜನವರಿ 31 ರಂದು ಅಥವಾ ಅದಕ್ಕೂ ಮೊದಲು ನೊಬೆಲ್ ಸಮಿತಿಗಳಿಗೆ ಸಲ್ಲಿಸಬೇಕು.

ಫೆಬ್ರವರಿ 1 ರಂದು ಆರು ನೊಬೆಲ್ ಸಮಿತಿಗಳು – ಪ್ರತಿ ಬಹುಮಾನ ವಿಭಾಗಕ್ಕೆ ಒಂದು – ಸ್ವೀಕರಿಸಿದ ನಾಮನಿರ್ದೇಶನಗಳ ಮೇಲೆ ತಮ್ಮ ಕೆಲಸವನ್ನು ಪ್ರಾರಂಭಿಸುತ್ತವೆ. ಸಮಿತಿಗಳು ಪ್ರತಿಯೊಬ್ಬ ನಾಮನಿರ್ದೇಶಿತರ ಕೊಡುಗೆಯ ಸ್ವಂತಿಕೆ ಮತ್ತು ಮಹತ್ವವನ್ನು ನಿರ್ಧರಿಸಲು ಸಹಾಯ ಮಾಡಲು ಪ್ರಕ್ರಿಯೆಯ ಸಮಯದಲ್ಲಿ ಹೊರಗಿನ ತಜ್ಞರನ್ನು ಆಗಾಗ್ಗೆ ಸಂಪರ್ಕಿಸಲಾಗುತ್ತದೆ. ಸೆಪ್ಟೆಂಬರ್ ಮತ್ತು ಅಕ್ಟೋಬರ್ ಆರಂಭದಲ್ಲಿ ನೊಬೆಲ್ ಸಮಿತಿಗಳು ತಮ್ಮ ಕೆಲಸವನ್ನು ಪೂರ್ಣಗೊಳಿಸಿವೆ ಮತ್ತು ರಾಯಲ್ ಸ್ವೀಡಿಷ್ ಅಕಾಡೆಮಿ ಆಫ್ ಸೈನ್ಸಸ್ ಮತ್ತು ಇತರ ಬಹುಮಾನ ನೀಡುವ ಸಂಸ್ಥೆಗಳಿಗೆ ತಮ್ಮ ಶಿಫಾರಸುಗಳನ್ನು ಸಲ್ಲಿಸುತ್ತವೆ. ಸಮಿತಿಯ ಶಿಫಾರಸನ್ನು ಸಾಮಾನ್ಯವಾಗಿ ಆದರೆ ಯಾವಾಗಲೂ ಅನುಸರಿಸಲಾಗುವುದಿಲ್ಲ. ಈ ಸಂಸ್ಥೆಗಳಲ್ಲಿನ ಚರ್ಚೆಗಳು ಮತ್ತು ಮತದಾನವು ಎಲ್ಲಾ ಹಂತಗಳಲ್ಲಿಯೂ ರಹಸ್ಯವಾಗಿರುತ್ತದೆ. ಪ್ರಶಸ್ತಿ ನೀಡುವವರ ಅಂತಿಮ ನಿರ್ಧಾರವನ್ನು ನವೆಂಬರ್ 15 ರೊಳಗೆ ತೆಗೆದುಕೊಳ್ಳಬೇಕು. ಶಾಂತಿ ಪ್ರಶಸ್ತಿಯನ್ನು ಹೊರತುಪಡಿಸಿ, ವ್ಯಕ್ತಿಗಳಿಗೆ ಮಾತ್ರ ಬಹುಮಾನಗಳನ್ನು ನೀಡಬಹುದು, ಇದನ್ನು ಒಂದು ಸಂಸ್ಥೆಗೆ ಸಹ ನೀಡಬಹುದು. ಒಬ್ಬ ವ್ಯಕ್ತಿಯನ್ನು ಮರಣೋತ್ತರವಾಗಿ ನಾಮನಿರ್ದೇಶನ ಮಾಡಲಾಗುವುದಿಲ್ಲ, ಆದರೆ ಬಹುಮಾನವನ್ನು ಪಡೆಯುವ ಮೊದಲು ಮರಣ ಹೊಂದಿದ ವಿಜೇತರಿಗೆ ಮರಣೋತ್ತರವಾಗಿ ನೀಡಬಹುದು, ಡ್ಯಾಗ್ ಹ್ಯಾಮರ್ಸ್ಕ್‌ಜೋಲ್ಡ್ (ಶಾಂತಿಗಾಗಿ, 1961), ಎರಿಕ್ ಆಕ್ಸೆಲ್ ಕಾರ್ಲ್‌ಫೆಲ್ಡ್ (ಸಾಹಿತ್ಯಕ್ಕಾಗಿ, 1931), ಮತ್ತು ರಾಲ್ಫ್ ಎಂ. ಸ್ಟೈನ್‌ಮನ್ (ಶರೀರಶಾಸ್ತ್ರ ಅಥವಾ ವೈದ್ಯಕೀಯಕ್ಕಾಗಿ, 2011). ಸ್ಟೈನ್‌ಮನ್ ಅವರ ಮರಣದ ಹಲವಾರು ದಿನಗಳ ನಂತರ ಅವರನ್ನು ವಿಜೇತ ಎಂದು ಹೆಸರಿಸಲಾಯಿತು, ಅದು ನೊಬೆಲ್ ಸಭೆಗೆ ತಿಳಿದಿರಲಿಲ್ಲ. ಮರಣೋತ್ತರ ನಿಯಮದ ಉದ್ದೇಶವು ಮೃತ ವ್ಯಕ್ತಿಗಳಿಗೆ ಉದ್ದೇಶಪೂರ್ವಕವಾಗಿ ಪ್ರಶಸ್ತಿಗಳನ್ನು ನೀಡುವುದನ್ನು ತಡೆಯುವುದರಿಂದ ಅವರು ನೊಬೆಲ್ ಪ್ರಶಸ್ತಿ ವಿಜೇತರಾಗಿ ಉಳಿಯುತ್ತಾರೆ ಎಂದು ನಿರ್ಧರಿಸಲಾಯಿತು. ಪ್ರಶಸ್ತಿಗಳನ್ನು ಮೇಲ್ಮನವಿ ಸಲ್ಲಿಸಲಾಗುವುದಿಲ್ಲ. ನಿರ್ದಿಷ್ಟ ಅಭ್ಯರ್ಥಿಗೆ ರಾಜತಾಂತ್ರಿಕ ಅಥವಾ ರಾಜಕೀಯ ಬೆಂಬಲವು ಪ್ರಶಸ್ತಿ ಪ್ರಕ್ರಿಯೆಯ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಏಕೆಂದರೆ ಪ್ರಶಸ್ತಿ ನೀಡುವವರು ರಾಜ್ಯದಿಂದ ಸ್ವತಂತ್ರರಾಗಿರುತ್ತಾರೆ.

**ಮನೆ ಮದ್ದು :**

ರಾತ್ರಿ ಹೊತ್ತು ಒಂದು ಚಮಚದಷ್ಟು ಮೆಂತ್ಯ ಕಾಳನ್ನು ಒಂದು ಲೋಟ ನೀರಿನಲ್ಲಿ ನೆನೆಸಿಡಿ. ಬೆಳಿಗ್ಗೆ ಆ ನೀರನ್ನು ಕುಡಿಯುವುದರಿಂದ ಸಕ್ಕರೆ ಕಾಯಿಲೆ ನಿಯಂತ್ರಣಕ್ಕೆ ತರಬಹುದು.

## ಬಹುಮಾನಗಳು


ನೊಬೆಲ್ ಪ್ರಶಸ್ತಿ ಶಾಂತಿಗಾಗಿ ನೀಡಲಾಗುವ ನೊಬೆಲ್ ಪ್ರಶಸ್ತಿ ಪದಕದ ಹಿಂಭಾಗ.

ನೊಬೆಲ್ ಪ್ರಶಸ್ತಿ ಪದಕ ಭೌತಶಾಸ್ತ್ರ, ರಸಾಯನಶಾಸ್ತ್ರ, ಶರೀರಶಾಸ್ತ್ರ ಅಥವಾ ವೈದ್ಯಕೀಯ ಮತ್ತು ಸಾಹಿತ್ಯಕ್ಕಾಗಿ ನೊಬೆಲ್ ಪ್ರಶಸ್ತಿ ಪದಕಗಳ ಹಿಂಭಾಗ.

ಪ್ರತಿಯೊಂದು ನೊಬೆಲ್ ಪ್ರಶಸ್ತಿಯು ಚಿನ್ನದ ಪದಕ, ಉಲ್ಲೇಖ ಪತ್ರ ಮತ್ತು ಹಣದ ಮೊತ್ತವನ್ನು ಒಳಗೊಂಡಿರುತ್ತದೆ, ಇದರ ಮೊತ್ತವು ನೊಬೆಲ್ ಪ್ರತಿಷ್ಠಾನದ ಆದಾಯವನ್ನು ಅವಲಂಬಿಸಿರುತ್ತದೆ . ನೊಬೆಲ್ ಪ್ರಶಸ್ತಿಯನ್ನು ಸಂಪೂರ್ಣವಾಗಿ ಒಬ್ಬ ವ್ಯಕ್ತಿಗೆ ನೀಡಲಾಗುತ್ತದೆ, ಇಬ್ಬರು ವ್ಯಕ್ತಿಗಳ ನಡುವೆ ಸಮಾನವಾಗಿ ವಿಂಗಡಿಸಲಾಗಿದೆ ಅಥವಾ ಮೂರು ವ್ಯಕ್ತಿಗಳು ಹಂಚಿಕೊಳ್ಳುತ್ತಾರೆ. ನಂತರದ ಸಂದರ್ಭದಲ್ಲಿ, ಮೂವರು ವ್ಯಕ್ತಿಗಳಲ್ಲಿ ಪ್ರತಿಯೊಬ್ಬರೂ ಬಹುಮಾನದ ಮೂರನೇ ಒಂದು ಭಾಗದಷ್ಟು ಪಾಲನ್ನು ಪಡೆಯಬಹುದು ಅಥವಾ ಇಬ್ಬರು ಒಟ್ಟಿಗೆ ಒಂದೂವರೆ ಪಾಲನ್ನು ಪಡೆಯಬಹುದು. ಕೆಲವೊಮ್ಮೆ ಬಹುಮಾನವನ್ನು ಮುಂದಿನ ವರ್ಷದವರೆಗೆ ತಡೆಹಿಡಿಯಲಾಗುತ್ತದೆ, ನಂತರ ನೀಡದಿದ್ದರೆ, ಅದನ್ನು ನಿಧಿಗೆ ಹಿಂತಿರುಗಿಸಲಾಗುತ್ತದೆ, ಇದು ಬಹುಮಾನವನ್ನು ನೀಡದಿದ್ದಾಗ ಅಥವಾ ಕಾಯ್ದಿರಿಸದಿದ್ದಾಗಲೂ ಸಂಭವಿಸುತ್ತದೆ. ಒಂದೇ ಕ್ಷೇತ್ರದಲ್ಲಿ ಎರಡು ಬಹುಮಾನಗಳನ್ನು – ಅಂದರೆ, ಹಿಂದಿನ ವರ್ಷದಿಂದ ತಡೆಹಿಡಿಯಲಾದ ಬಹುಮಾನ ಮತ್ತು ಪ್ರಸ್ತುತ ವರ್ಷದ ಬಹುಮಾನ – ಹೀಗೆ ಒಂದು ವರ್ಷದಲ್ಲಿ ನೀಡಬಹುದು. ಬಹುಮಾನವನ್ನು ನಿರಾಕರಿಸಿದರೆ ಅಥವಾ ನಿಗದಿತ ದಿನಾಂಕದ ಮೊದಲು ಸ್ವೀಕರಿಸದಿದ್ದರೆ, ಬಹುಮಾನದ ಹಣವು ನಿಧಿಗೆ ಹಿಂತಿರುಗುತ್ತದೆ. ಕೆಲವು ಬಹುಮಾನಗಳನ್ನು ಅವುಗಳ ವಿಜೇತರು ನಿರಾಕರಿಸಿದ್ದಾರೆ ಮತ್ತು ಕೆಲವು ಸಂದರ್ಭಗಳಲ್ಲಿ ಸರ್ಕಾರಗಳು ತಮ್ಮ ನಾಗರಿಕರು ಅವುಗಳನ್ನು ಸ್ವೀಕರಿಸಲು ನಿರಾಕರಿಸಿವೆ. ಆದಾಗ್ಯೂ, ಬಹುಮಾನವನ್ನು ಗೆದ್ದವರನ್ನು "ಬಹುಮಾನವನ್ನು ನಿರಾಕರಿಸಲಾಗಿದೆ" ಎಂಬ ಹೇಳಿಕೆಯೊಂದಿಗೆ ನೊಬೆಲ್ ಪ್ರಶಸ್ತಿ ವಿಜೇತರ ಪಟ್ಟಿಯಲ್ಲಿ ಸೇರಿಸಲಾಗುತ್ತದೆ.

## ಶಾಂತಿಗಾಗಿ ನೊಬೆಲ್ ಪ್ರಶಸ್ತಿ ಪದಕ

ನೊಬೆಲ್ ಅವರ ಉಯಿಲಿನ ಅರ್ಥದಲ್ಲಿ ಯಾವುದೇ ಯೋಗ್ಯ ಅಭ್ಯರ್ಥಿ ಸಿಗದಿದ್ದಾಗ ಅಥವಾ ನಿರ್ಧಾರ ತೆಗೆದುಕೊಳ್ಳಲು ಅಗತ್ಯವಾದ ಮಾಹಿತಿಯನ್ನು ಸಂಗ್ರಹಿಸಲು ವಿಶ್ವ ಪರಿಸ್ಥಿತಿ ಅಡ್ಡಿಯಾದಾಗ, ಅಂದರೆ ಮೊದಲ ಮತ್ತು ಎರಡನೇ ಮಹಾಯುದ್ಧಗಳ ಸಮಯದಲ್ಲಿ ಸಂಭವಿಸಿದಂತೆ, ಬಹುಮಾನಗಳನ್ನು ತಡೆಹಿಡಿಯಲಾಗುತ್ತದೆ ಅಥವಾ ನೀಡಲಾಗುವುದಿಲ್ಲ. ರಾಷ್ಟ್ರೀಯತೆ, ಜನಾಂಗ, ಧರ್ಮ ಅಥವಾ ಸಿದ್ಧಾಂತವನ್ನು ಲೆಕ್ಕಿಸದೆ ಎಲ್ಲರಿಗೂ ಬಹುಮಾನಗಳು ಮುಕ್ತವಾಗಿವೆ. ಒಂದೇ ಸ್ವೀಕರಿಸುವವರಿಗೆ ಅವುಗಳನ್ನು ಒಂದಕ್ಕಿಂತ ಹೆಚ್ಚು ಬಾರಿ ನೀಡಬಹುದು. ಭೌತಶಾಸ್ತ್ರ, ರಸಾಯನಶಾಸ್ತ್ರ, ಶರೀರಶಾಸ್ತ್ರ ಅಥವಾ ಔಷಧ, ಸಾಹಿತ್ಯ ಮತ್ತು ಅರ್ಥಶಾಸ್ತ್ರಕ್ಕಾಗಿ ಪ್ರಶಸ್ತಿಗಳ ವಿಧ್ಯುಕ್ತ ಪ್ರಸ್ತುತಿಗಳು ಸ್ಟಾಕ್‌ಹೋಮ್‌ನಲ್ಲಿ ನಡೆಯುತ್ತವೆ ಮತ್ತು ಶಾಂತಿಗಾಗಿ ಪ್ರಶಸ್ತಿಗಳು ಡಿಸೆಂಬರ್ 10 ರಂದು ನೊಬೆಲ್ ಅವರ ಮರಣದ ವಾರ್ಷಿಕೋತ್ಸವದಂದು ಓಸ್ಲೋದಲ್ಲಿ ನಡೆಯುತ್ತವೆ . ಪ್ರಶಸ್ತಿ ವಿಜೇತರು ಸಾಮಾನ್ಯವಾಗಿ ತಮ್ಮ ಪ್ರಶಸ್ತಿಗಳನ್ನು ವೈಯಕ್ತಿಕವಾಗಿ ಸ್ವೀಕರಿಸುತ್ತಾರೆ ಮತ್ತು ಪ್ರತಿಯೊಬ್ಬರೂ ಪ್ರಶಸ್ತಿ ಪ್ರದಾನ ಸಮಾರಂಭಗಳಿಗೆ ಸಂಬಂಧಿಸಿದಂತೆ ಉಪನ್ಯಾಸವನ್ನು ನೀಡುತ್ತಾರೆ. ॐ



## ಯುಗದಕವಿ, ಜಗದಕವಿ, ರಸಋಷಿ, ರಾಷ್ಟ್ರಕವಿ

# ಕುವೆಂಪು



ಕನ್ನಡ ಎನೆ ಕುಣಿದಾಡುವುದೆನ್ನೆದೆ
ಕನ್ನಡ ಎನೆ ಕಿವಿನಿಮಿರುವುದು
ಕನ್ನಡ.. ಕನ್ನಡ.. ಆ..ಸವಿ ಕನ್ನಡ..

ಎಂದು ಕನ್ನಡಿಗರನ್ನು ಸಾಹಿತ್ಯದಲೆಗಳ ಮೇಲೆ ತೇಲುವಂತೆ ಮಾಡಿದ ಶಬ್ಧಮಾಂತ್ರಿಕ.. ಕರುನಾಡಿಗೆ 'ಜಯಭಾರತ ಜನನಿಯ ತನುಜಾತೆ ಜಯಹೇ ಕರ್ನಾಟಕಮಾತೆ' ಎಂಬ ನಾಡಗೀತೆಯ ಪದಪುಂಜಗಳಿಂದ ಕನ್ನಡಮಾತೆಗೆ ಶಬ್ದಾರ್ಚನೆ ಮಾಡಿದ ಸಹ್ಯಾದ್ರಿ ಸಾಲ ಕವಿಕುಲೋತ್ತಮ ಕುವೆಂಪು, ಕನ್ನಡ ಸಾಹಿತ್ಯ ಲೋಕದ ಅಪ್ಪಟ ಕವಿಕೋಗಿಲೆ.

ಕುವೆಂಪುರವರು ಕನ್ನಡ ನಾಡಿನ ಹೆಮ್ಮೆಯ ರಸಕವಿ, ಋಷಿಕವಿ, ರಾಷ್ಟ್ರಕವಿ ಕನ್ನಡದ ಮತ್ತೋರ್ವ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದಕವಿ, ಜಗದಕವಿ ಎಂದು ಕೀರ್ತಿತರಾಗಿದ್ದಂತಹವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾನ್ ಚೇತನ.

ಕುವೆಂಪು ಒಬ್ಬ ದಾರ್ಶನಿಕ ಲೇಖಕರು. ವರ್ತಮಾನದ ನಿತ್ಯವನ್ನೂ, ತ್ರಿಕಾಲದ ಭವ್ಯವನ್ನೂ, ಭೂಮವನ್ನೂ, ಅಲ್ಪವನ್ನೂ ಒಂದು ಪೂರ್ಣ ದೃಷ್ಟಿಯಲ್ಲಿ ಒಳಗೊಳ್ಳಲು ಪ್ರಯತ್ನಿಸಿದ ತಪಸ್ವಿಗಳು. 'ಕಾಡಿನ ಕೊಳಲಿದು, ಕಾಡ ಕವಿಯು ನಾ, ನಾಡಿನ ಜನರೊಲಿದಾಲಿಪುದು' ಎಂಬ ಭಿನ್ನಹದೊಂದಿಗೆ ಕಳೆದ ಶತಮಾನದ 3 ನೆಯ ದಶಕದಲ್ಲಿ ಕನ್ನಡ ನವೋದಯವನ್ನು ಪ್ರವೇಶಿಸಿದ ಈ ಕಾಡಿನ ಕವಿ ಅನಂತರ ನಾಡಿನ ಕವಿಯಾಗಿ ಕುವೆಂಪು ಎಂಬ ಮೂರಕ್ಷರದಿಂದಲೇ ಕನ್ನಡಿಗರ ಮನೆ ಮಾತಾದ ರಾಷ್ಟ್ರಕವಿ ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ, ಹೊಸಗನ್ನಡ ಸಾಹಿತ್ಯದ ಹಿರಿಯ ಕವಿ. ಕನ್ನಡ ಸಾಹಿತ್ಯವನ್ನು ವಿಶ್ವ ಸಾಹಿತ್ಯ ವೇದಿಕೆಗೆ ಕೊಂಡೊಯ್ದ ವಿಶ್ವಮಾನವ, ಕನ್ನಡದ ಮಹಾನ್ ಚೇತನ.

### ಬಾಲ್ಯ ಜೀವನದ ಕಂಪು:

ಕುವೆಂಪುರವರು ಹುಟ್ಟಿದ್ದು 29 ಡಿಸೆಂಬರ್ 1904, ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳ್ಳಿಯಲ್ಲಿ. ತಂದೆ ವೆಂಕಟಪ್ಪಗೌಡರು, ತಾಯಿ ಸೀತಮ್ಮ. ಆದರೆ ಕುವೆಂಪುರವರು ಹುಟ್ಟಿದ್ದು ತಾಯಿಯ ತವರಾದ ಚಿಕ್ಕಮಗಳೂರು ಜಿಲ್ಲೆಯ ಹಿರೇಕೊಡಗಿ ಗ್ರಾಮದಲ್ಲಿ. ಮಲೆನಾಡಿನ ಮಡಿಲಿನಲ್ಲಿ ಹುಟ್ಟಿ ಬೆಳೆದ ಕುವೆಂಪುರವರು ಶಾಲೆ, ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ಕಲಿತದ್ದಕ್ಕಿಂತ ಹೆಚ್ಚಿನ ವಿಷಯವನ್ನು ಕಲಿಸಿದ್ದು ಮಲೆನಾಡಿನ ಪ್ರಕೃತಿ. ಹೀಗಾಗೆ ಅವರ ಎಲ್ಲಾ ಕೃತಿಗಳಲ್ಲಿ ಮಲೆನಾಡಿನ ಸೊಬಗು ಕಂಗೊಳಿಸುತ್ತದೆ.

### ಓದುವಾಗಲೇ ಕವಿಹೃದಯ:

ಎಸ್.ಎಸ್. ಎಲ್.ಸಿ ಓದುವಾಗಲೇ ಕುವೆಂಪುರವರು ಬರೆದಿದ್ದ 'ಬಿಗಿನರ್ಸ್ ಮ್ಯೂಸ್' ಎಂಬ ಇಂಗ್ಲೀಷ್ ಕವನ ಸಂಕಲನ ಭಾರತ ಭೇಟಿಗೆ ಬಂದಿದ್ದ ಐರಿಷ್ ಕವಿ ಜೆ.ಹೆಚ್.ಕಸಿನ್ಸ್‌ರ ಮೆಚ್ಚುಗೆಗೆ ಪಾತ್ರವಾಗಿತ್ತು. ನಂತರ ಅವರ

ಸಲಹೆಯಂತೆ ಕನ್ನಡದಲ್ಲಿ ಬರೆಯಲಾರಂಭಿಸಿದ ಕುವೆಂಪುರವರು ಬರೆದ ಮೊದಲ ಕನ್ನಡ ಕವನ ಸಂಕಲನ 'ಅಮಲನ ಕಥೆ' ಚಿಕ್ಕಂದಿನಿಂದಲೇ ಮಲೆನಾಡಿನ ಪರಿಸರದಲ್ಲಿ ಬೆಳೆದ ಕುವೆಂಪುರವರಿಗೆ ಅಪಾರವಾದ ಪರಿಸರ ಪ್ರೇಮ. ಅವರ ಪರಿಸರ ಪ್ರೀತಿಯೇ ಅವರ ಕಾವ್ಯದಲ್ಲಿ ಜೀವಂತವಾಗಿ ಮೇಳೈಸಿದೆ.

**ಮಹಾಮಹಿಮರ ಮಾರ್ಗದರ್ಶನ:**

ಜೊತೆಗೆ ನಾಡು ಕಂಡ ಧೀಮಂತರಾದ ಶ್ರೀ ಟಿ.ಎಸ್.ವೆಂಕಣ್ಣಯ್ಯ, ಬಿ.ಎಂ.ಶ್ರೀ, ಎ.ಆರ್.ಕೃಷ್ಣಶಾಸ್ತ್ರಿರವರ ಒಡನಾಟ, ಮಾರ್ಗದರ್ಶನಗಳು ಅವರ ಸಾಹಿತ್ಯವನ್ನು ಶ್ರೀಮಂತಗೊಳಿಸಿದವು. 1925ರಲ್ಲಿ ಪ್ರಕಟವಾದ ಕುವೆಂಪುರವರ 'ಬೊಮ್ಮನಹಳ್ಳಿ ಕಿಂದರಿ ಜೋಗಿ' ನಾಡಿನಾದ್ಯಂತ ಮಕ್ಕಳ ಬಾಯಲ್ಲಿ ನಲಿದಾಡಿತು. ಸೆಂಟ್ರಲ್ ಕಾಲೇಜು ವಿದ್ಯಾರ್ಥಿಯಾಗಿದ್ದ ಕುವೆಂಪುರವರಿಗೆ ಕವಿ ಸಮ್ಮೇಳನದ ಅಧ್ಯಕ್ಷ ಪದವಿಯೂ ಅರಸಿ ಬಂತು.

**ವಿಶ್ವಮಾನವ ಸಂದೇಶ :**

ಕುವೆಂಪು ತಮ್ಮ ಬದುಕಿನ ಸಂದೇಶವೆಂದು 'ವಿಶ್ವಮಾನವನ' ಪರಿಕಲ್ಪನೆಯೊಂದನ್ನು ಮಂಡಿಸಿದವರು. 'ಪ್ರತಿಯೊಂದು ಮಗುವು ಹುಟ್ಟುತ್ತಲೇ ವಿಶ್ವಮಾನವ, ಬೆಳೆಯುತ್ತಾ ನಾವು ಅದನ್ನು ಅಲ್ಪ ಮಾನವನ'ನ್ನಾಗಿ ಮಾಡುತ್ತೇವೆ. ಮತ್ತೇ ಅದನ್ನು ವಿಶ್ವಮಾನವನ್ನಾಗಿ ಮಾಡುವುದೇ ವಿದ್ಯೆಯ ಕರ್ತವ್ಯವಾಗಬೇಕು. ಇದನ್ನು ಕಾರ್ಯಗತಗೊಳಿಸಲು ಅಗತ್ಯವಾದ ಸಪ್ತ ಸೂತ್ರಗಳನ್ನು ಮಂಡಿಸುತ್ತಾ 'ಮನುಷ್ಯಜಾತಿ ತಾನೊಂದೇ ವಲಂ' ಎಂಬ ಕವಿ ಪಂಪನ ಸೂತ್ರವನ್ನು ನಿರುಪಾಧಿಕವಾಗಿ ಸ್ವೀಕರಿಸಬೇಕು ಎನ್ನುತ್ತಾರೆ ಕುವೆಂಪು. ಆದರೆ ಮನುಷ್ಯ ಮನುಷ್ಯನಾಗಿ ಬದುಕುವುದೇ ಸಾಧ್ಯವಾಗದಂತಹ ವಿದ್ಯಮಾನಗಳು ಸಂಭವಿಸುತ್ತಿರುವ ಈ ಹೊತ್ತಿನಲ್ಲಿ ಅನೇಕ ವಿಚ್ಛಿದ್ರಕಾರಕ ಶಕ್ತಿಗಳಿಂದ ಮನುಷ್ಯತ್ವವೇ ಚೂರು ಚೂರಾಗುತ್ತಿರುವ ಸಂದರ್ಭದಲ್ಲಿ ಕುವೆಂಪು ಅವರ ವಿಶ್ವಮಾನವ ಕಲ್ಪನೆ ಒಂದು ದೂರದ, ಎತ್ತರದ ಬೆಳಕು ಮಾತ್ರ !.

**ಕಾಡು ಕವಿ :**

ಪಂಪನಿಗೆ ಧರ್ಮ ಮತ್ತು ಕಾವ್ಯಧರ್ಮ ಹೇಗೆ ಬೇರೆ ಬೇರೆಯಾಗಿರಲಿಲ್ಲವೋ ಹಾಗೆಯೇ ಕುವೆಂಪು ಅವರಿಗೆ ಪ್ರಕೃತಿ ಮತ್ತು ಕಾವ್ಯ ಪ್ರಕೃತಿ ಬೇರೆ ಬೇರೆಯಾಗಿರಲಿಲ್ಲ. ಕಣ್ಣಿಗೆ ಕಾಣುವ ಪ್ರಕೃತಿ ಹಾಗೂ ಕಣ್ಣಿಗೆ ಕಾಣದ ಪ್ರಕೃತಿಗಳ ಅಂತರ ಸಂಬಂಧವನ್ನು, ಅಂತರ ವಿರೋಧವನ್ನು ತಮ್ಮ ಕೃತಿಗಳಲ್ಲಿ ಅನುಸಂಧಾನ ಮಾಡುತ್ತಾರೆ. ಕಾಡಿನ ರುದ್ರ ಭೀಕರತೆಯನ್ನು ಸೌಮ್ಯ ಸೌಂದರ್ಯವನ್ನು ತಮ್ಮ ಪಾತ್ರಗಳ ವ್ಯಕ್ತಿತ್ವಗಳ ಬೆಳವಣಿಗೆಗೆ ಭಿತ್ತಿಯಾಗಿ ಬೆಳೆಸುತ್ತಾರೆ. ಕಾಡಿನ ಮಹತ್ವ, ಪ್ರಕೃತಿಯ ಅನಂತತೆಯನ್ನು ಸಾರುತ್ತಾರೆ. ಪ್ರಕೃತಿ ತನಗೋಸ್ಕರ ಇದೆ ಎಂಬ ಯಜಮಾನ ಧೋರಣೆಯನ್ನು ಖಂಡಿಸಿ ತಾನು ಅದರ ಒಂದು ಭಾಗ ಮಾತ್ರ ಎಂಬುದನ್ನು ಮನದಟ್ಟಾಗಿಸಿ ಮನುಷ್ಯ ಸಾಧ್ಯತೆಗಳ ಮಿತಿಯನ್ನು ತೋರಿಸುವುದು ಕುವೆಂಪು ಅವರ ಉದ್ಧೇಶವಾಗಿದೆ.

ಕುವೆಂಪು ತಮ್ಮ ಎರಡು ಕಾದಂಬರಿಗಳಲ್ಲೂ ಮಲೆನಾಡಿನ ಬದುಕನ್ನು ಚಿತ್ರಿಸಿದ್ದಾರೆ. ಹೀಗೆ ಚಿತ್ರಿಸುವಾಗ ಇದು ಸೌಂದರ್ಯ ವರ್ಣನೆ, ಇದು ಕಾಡಿನ ವರ್ಣನೆ, ಇದು ಸಂಪ್ರದಾಯದ ವರ್ಣನೆ ಎಂದೇನು ವಿಭಾಗಿಸಿಲ್ಲ. ಕುವೆಂಪು ಸಾಹಿತ್ಯದಲ್ಲಿ ಪರಿಸರ ಎಂದ ಕೂಡಲೇ ನಮ್ಮ ಮನಸ್ಸಿನಲ್ಲಿ ಮೂಡುವುದು ಅಲ್ಲಿನ ಮರಗಿಡ ಬಳ್ಳಿಗಳು, ನದಿ ತೊರೆಗಳು, ಬೆಟ್ಟ ಗುಡ್ಡಗಳು, ಪ್ರಾಣಿಪಕ್ಷಿಗಳು, ಇನ್ನಿತರ ಸಂಗತಿಗಳನ್ನು ಹೇಗೆ ವರ್ಣಿಸಿದ್ದಾರೆ ಎಂಬುದು ಬೇರೆಲ್ಲಾ ಅವರ ಕೃತಿಗಳಿಗಿಂತ ಕಾದಂಬರಿಗಳಲ್ಲಿ ಇವೆಲ್ಲದರ ವರ್ಣನೆ ಹೆಚ್ಚಾಗಿಯು ಇದೆ.

ಕುವೆಂಪು ಅವರ ಎರಡು ಕಾದಂಬರಿಗಳಲ್ಲಿ ಬರುವ ಪರಿಸರ ಚಿತ್ರಣ, ಕಾಡು, ಗಿಡ, ಮರ, ಬೆಟ್ಟ ಗುಡ್ಡಕ್ಕೆ ಮೀಸಲಿಲ್ಲ, ಅಜ್ಞಾನ, ಮೂಢನಂಬಿಕೆ, ಶೋಷಣೆ ಇವೆಲ್ಲವುಗಳಿಂದ ಮುಕ್ತವಾಗಿ ಬದುಕಲಿಕ್ಕೆ ಬೇಕಾದ ಸಹನೀಯ ವಾತಾವರಣ ನಿರ್ಮಿಸುವುದಾಗಿದೆ. ಒಂದು ಜೀವ ಬದುಕಲಿಕ್ಕೆ ಸಾಧ್ಯವಾಗದಂತಹ ಪರಿಸರ ನಿರ್ಮಾಣವಾಗಿರುವುದನ್ನು ವಿರೋಧಿಸುವ ಮೂಲಕ ಸಮಾನತೆಯ ಕಾಳಜಿಗಳನ್ನು ಎತ್ತಿ ಹಿಡಿಯುವ ಕೆಲಸ ಮಾಡಿದ್ದಾರೆ.

ವಿಚಾರವಾದಿಯ ರೂಪ :

ಇಂಗ್ಲೀಷ್ ಶಿಕ್ಷಣ, ಪ್ರಾಚ್ಯ ಪಾಶ್ಚಾತ್ಯ, ತತ್ತ್ವಜ್ಞಾನಗಳ ತಳಸ್ಪರ್ಶಿಯಾದ ತಿಳುವಳಿಕೆ, ಆಧುನಿಕ ವಿಜ್ಞಾನ ಮತ್ತು ಜಾಗತಿಕ ಸಮಾಜವಾದಿ ಚಿಂತನೆಗಳೊಂದಿಗೆ ನಡೆಸಿದ ಸಂವಾದ, ಶ್ರೀ ರಾಮಕೃಷ್ಣ, ವಿವೇಕಾನಂದ ಗಾಂಧಿ, ಅರವಿಂದ ಮತ್ತು ಲೋಹಿಯಾ ಇಂತಹ ವ್ಯಕ್ತಿತ್ವಗಳ ಚಿಂತನೆಯ ಪ್ರಭಾವ ಇತ್ಯಾದಿಗಳಿಂದ ರೂಪುಗೊಂಡ ಕುವೆಂಪು ಅವರ ವೈಚಾರಿಕತೆಯು ಮನುಷ್ಯ ಚೈತನ್ಯದ ಚಲನಶೀಲತೆಯನ್ನು ಸ್ಥಗಿತಗೊಳಿಸುವ ಎಲ್ಲಾ ವಿಕೃತಿಗಳನ್ನು ವಿರೋಧಿಸುತ್ತಾ, ಮನುಷ್ಯರೆಲ್ಲರ ಘನತೆಯನ್ನು ಎತ್ತಿ ಹಿಡಿಯುವ ಸ್ವರೂಪದ್ದಾಗಿದೆ.

### ಕನ್ನಡಕ್ಕೆ ಕುವೆಂಪು ಸಾಹಿತ್ಯ ಕಾಣಿಕೆ :

ಕುವೆಂಪು ಅವರು ಬರೆದ ಎರಡು ಕಾದಂಬರಿಗಳಾದ 'ಕಾನೂರು ಸುಬ್ಬಮ್ಮ ಹೆಗ್ಗಡತಿ' ಮತ್ತು 'ಮಲೆಗಳಲ್ಲಿ ಮಧುಮಗಳು' ಭಾರತೀಯ ಸಾಹಿತ್ಯ ಪ್ರಪಂಚದಲ್ಲೇ ಶ್ರೇಷ್ಠಕೃತಿಗಳೆಂಬ ಪ್ರಶಂಸೆಗೆ ಪಾತ್ರವಾಗಿವೆ. ಕನ್ನಡಕ್ಕೆ ಮೊದಲ ಜ್ಞಾನಪೀಠವನ್ನು ತಂದು ಕೊಟ್ಟ ಹಿರಿಮೆಯನ್ನು ಹೊಂದಿದ ಇವರ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯ ಸಂಸ್ಕೃತ ಮತ್ತು ಹಿಂದಿ ಭಾಷೆಗೆ ಅನುವಾದಗೊಂಡಿದೆ.

ಇವರು 'ಬೆರಳ್ಗೆ ಕೊರಳ್, ಶೂದ್ರ ತಪಸ್ವಿ, ಸ್ಮಶಾನ ಕುರುಕ್ಷೇತ್ರಂ, ರಕ್ತಾಕ್ಷಿ, ಜಲಗಾರ' ಮೊದಲಾದ ನಾಟಕಗಳನ್ನು ಬರೆದಿದ್ದಾರೆ. ಜೊತೆಗೆ ಕೊಳಲು, ಅಗ್ನಿಹಂಸ, ಅನಿಕೇತನ, ಅನುತ್ತರಾ, ಇಕ್ಷುಗಂಗೋತ್ರಿ ಕಥನ ಕವನಗಳು. ಕಲಾ ಸುಂದರಿ, ಕಿಂಕಿಣಿ, ಕೃತ್ತಿಕೆ, ಜೇನಾಗುವೆ, ನವಿಲು, ಪಕ್ಷಿಕಾಶಿ, ಚಿತ್ರಾಂಗದಾ ಮೊದಲಾದ ಕವನ ಸಂಕನಗಳು. ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆಗಳನ್ನು ಇವರು ಬರೆದಿದ್ದಾರೆ. 'ನೆನಪಿನ ದೋಣಿಯಲ್ಲಿ' ಕುವೆಂಪುರವರ ಆತ್ಮಕಥೆ.

'ಅನಿಕೇತನ' ಪದ್ಯದ ಮೂಲಕ ವಿಶ್ವಮಾನವ ಸಂದೇಶವನ್ನು ಸಾರಿದ ಮಹಾಕವಿ ಕುವೆಂಪು, 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ಪಂಪನ ತಾತ್ವಿಕತೆಯನ್ನು ವಿಸ್ತರಿಸಿದವರು ಕುವೆಂಪು. ನಮಗೆ ಬೇಕಾಗಿರುವುದು ಆ ಮತ ಈ ಮತ ಅಲ್ಲ, ಮನುಜ ಮತ. ಆ ಪಥ ಈ ಪಥ ಅಲ್ಲ, ಸರ್ವರ ಸರ್ವಸ್ತರರ ಬದುಕು ಎನ್ನುತ್ತಾರೆ ಕುವೆಂಪು. ನಮ್ಮ ಹಳೆಯ ಶಾಸ್ತ್ರ ಪುರಾಣಗಳನ್ನು ಹೊಸ ಬೆಳಕಿನಲ್ಲಿಟ್ಟು ನೋಡಿ, ಅದರೊಳಗಿನ ಕಸ ಕೊಳೆಗಳನ್ನು ತೆಗೆದೆಸೆದು ಅಲ್ಲಿ ಹೊಸ ದೃಷ್ಟಿಕೋನವನ್ನಿಟ್ಟು ಕಸಿ ಮಾಡಿದರು. ಜಾತಿ ವ್ಯವಸ್ಥೆ, ಅಸ್ಪೃಶ್ಯತೆ ಮತ್ತು ಮೌಢ್ಯಗಳಿಂದ ಮುಕ್ತವಾದ ಸನಾತನ ಧರ್ಮ ಅವರ ಕನಸಾಗಿತ್ತು.

### ಬೇಂದ್ರೆಯೂರಲ್ಲಿ ಅಧ್ಯಕ್ಷತೆ :

ಕುವೆಂಪುರವರು ಕನ್ನಡ ಸಾಹಿತ್ಯಕ್ಕೆ ಸಲ್ಲಿಸಿದ ಸೇವೆ ಅಪಾರ. ಇವರು ಧಾರವಾಡದಲ್ಲಿ 1957ನೇ ವರ್ಷದಲ್ಲಿ ನಡೆದ 39ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. 1956ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಪಡೆದರು.

### ಮೊದಲ ಜ್ಞಾನಪೀಠ :

ಇವರ ಶ್ರೀ ರಾಮಾಯಣ ದರ್ಶನಂ ಕೃತಿಯು ಕನ್ನಡಕ್ಕೆ ಪ್ರಪ್ರಥಮ ಜ್ಞಾನಪೀಠ ಪ್ರಶಸ್ತಿಯನ್ನು ದೊರಕಿಸಿಕೊಟ್ಟಿತು. ಭಾರತ ಸರ್ಕಾರದ ಪದ್ಮವಿಭೂಷಣದಿಂದಲೂ ಪುರಸ್ಕೃತಗೊಂಡ ಇವರು 'ಜೈ ಭಾರತ ಜನನಿಯ ತನುಜಾತೆ' ಕನ್ನಡ ನಾಡ ಗೀತೆಯನ್ನು ರಚಿಸಿದ ಮೇರುಕವಿ. ರಾಷ್ಟ್ರಕವಿ ಬಿರುದು ಪಡೆದ ಮಹಾನ್ ಕವಿ.
ಸಾಹಿತ್ಯದ ಮೂಲಕವೇ ನಾಡಿನ ಜನ ಮಾನಸವನ್ನು ಅವರಷ್ಟು ಬಲವಾಗಿ ಪ್ರಭಾವಿಸಿದ ಮತ್ತೊಬ್ಬ ಬರಹಗಾರ ಇಲ್ಲ. ಕುವೆಂಪುರವರಿಗೆ ಕುವೆಂಪು ಅವರೇ ಸಾಟಿ!

ಕನ್ನಡ ಸಾಹಿತ್ಯದಲ್ಲಿ 20ನೇ ಶತಮಾನವನ್ನು 'ಕುವೆಂಪು ಯುಗ' ಎಂದು ಕರೆಯಲಾಗಿದೆ. ಸುಮಾರು ಮುಕ್ಕಾಲು ಶತಮಾನದ ಕಾಲ ಅವರು ಕನ್ನಡ ಸಾಹಿತ್ಯ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಅನಭಿಷಿಕ್ತ ಸಾಮ್ರಾಟರಾಗಿ

ರಾರಾಜಿಸಿದರು. ಮಲೆನಾಡಿನ ಯಾವುದೋ ಒಂದು ಮೂಲೆಯಲ್ಲಿ ಹುಟ್ಟಿದ ಈ ಕವಿಚೇತನ ಅಸಾಧಾರಣ ಶ್ರದ್ಧಾಭಕ್ತಿಯಿಂದಲೂ, ತಮ್ಮ ಏಕಾಗ್ರತೆಯಿಂದಲೂ, ವ್ಯಾಸಂಗ ಅಭ್ಯಾಸಗಳನ್ನು ನಡೆಸಿ ಒಬ್ಬ ಮಹಾಕವಿಯಾಗಿ, ಚಿಂತನಶೀಲರಾಗಿ, ವಿಚಾರವಾದಿಯಾಗಿ, ವಿಫುಲ ಸಾಹಿತ್ಯ ರಚನೆ ಮಾಡಿ ಕನ್ನಡಿಗರ ಗೌರವಾಧರಗಳಿಗೆ ಪಾತ್ರರಾಗಿದ್ದಾರೆ.

**ನಿಮಗೆ ನೀವೇ ಸರಿಸಾಟಿ :**

ಕನ್ನಡ ಕರ್ನಾಟಕದ ಬಗ್ಗೆ ಅವರು ಬರೆದಿರುವ ಭಾವಗೀತೆಗಳು ನಿತ್ಯನೂತನ. ಮನುಜ ಮತ ವಿಶ್ವಪಥವನ್ನು ಸಾರಿದ ಈ ಸಾಹಿತ್ಯ ಶ್ರೇಷ್ಠ ವಿಶ್ವಮಾನವರೆನಿ –ಸಿದವರು. ಮಹಾಕಾವ್ಯ, ನಾಟಕ, ಖಂಡಕಾವ್ಯ, ಕಥನಕಾವ್ಯ, ಭಾವಗೀತೆಯೇ ಮೊದಲಾದ ಹಲವು ಪ್ರಕಾರಗಳಲ್ಲಿ ಅತ್ಯುತ್ತಮ ಕೃತಿಗಳನ್ನು ನೀಡಿದ ಅದ್ವಿತೀಯ. ಕುವೆಂಪು ಅವರಂತೆ ಸರ್ವ ಪ್ರಕಾರಗಳಲ್ಲೂ ಏಕ ಪ್ರಕಾರವಾದ ಸಿದ್ಧಿ ಪಡೆದ ಕವಿಗಳು ಅತಿ ವಿರಳ.

ಕುವೆಂಪು ಆ ಹೆಸರಲ್ಲೇ ಏನೋ ಒಂದು ವಿಧವಾದ ಕಂಪು. ಇದು ಕನ್ನಡದ ಕಂಪು. ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯ ಏರುಗತಿಯಲ್ಲಿ ಸಾಗಲು ಕುವೆಂಪು ಕಾರಣಕರ್ತರು ಎಂದರೆ ತಪ್ಪಾಗಲಾರದು. ಕವನ, ಕಾವ್ಯ, ಸಣ್ಣಕಥೆಗಳು, ನಾಟಕ, ಕಾದಂಬರಿ, ಮಹಾಕಾವ್ಯ, ವಿಮರ್ಶೆ ಹೀಗೆ ಸಾಹಿತ್ಯದ ಹಲವಾರು ಪ್ರಕಾರಗಳಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಹಾಗೂ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸುವ ಮೂಲಕ ಅಜರಾಮರವಾಗಿ ಉಳಿದಿದ್ದಾರೆ. ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ರಾಷ್ಟ್ರ ಮತ್ತು ಅಂತರರಾಷ್ಟ್ರ ಮಟ್ಟದ ಖ್ಯಾತಿಯನ್ನು ತಂದುಕೊಟ್ಟಿದ್ದಾರೆ.

**ಸಂಸಾರ ನೌಕೆ :**

1937 ಎಪ್ರಿಲ್ 30 ರಂದು ಹೇಮಾವತಿಯವರನ್ನು ಕೈ ಹಿಡಿದರು.. ಪೂರ್ಣಚಂದ್ರ ತೇಜಸ್ವಿ ಮತ್ತು ಕೋಕಿಲೋದಯ ಚೈತ್ರ ಎಂಬ ಪುತ್ರರು, ಇಂದುಕಲಾ ಮತ್ತು ತಾರಿಣಿ ಎಂಬ ಇಬ್ಬರು ಪುತ್ರಿಯರಿದ್ದಾರೆ. ರಾಮಕೃಷ್ಣ ಪರಮಹಂಸರ ಜೀವನದಿಂದ ಪ್ರಭಾವಿತರಾದ ಕುವೆಂಪುರವರು ಸ್ವಾಮಿ ಶಿವಾನಂದರಿಂದ ದೀಕ್ಷೆ ಪಡೆದಿದ್ದಾರೆ.

ಕುವೆಂಪು ರಾಷ್ಟೀಯ ಪ್ರತಿಷ್ಠಾನ ಇವರು ಜನಿಸಿದ ಮನೆಯನ್ನು ಕವಿಮನೆ ಹೆಸರಿನ ಮ್ಯೂಸಿಯಂ ಮಾಡಿದೆ. 1987 ರಲ್ಲಿ ಶಿವಮೊಗ್ಗದಲ್ಲಿ ಕುವೆಂಪುರವರ ಗೌರವಾರ್ಥವಾಗಿ ಕುವೆಂಪು ವಿಶ್ವವಿದ್ಯಾಲಯ ಸ್ಥಾಪಿಸಲಾಯಿತು.

ಇಂತಹ ಮಹಾನ್ ಚೇತನ ನ.11 1994 ರಲ್ಲಿ ಮೈಸೂರಿನಲ್ಲಿ ಕೊನೆಯುಸಿರೆಳೆದು ಕನ್ನಡ ಮಾತೆಯ ಮಡಿಲು ಸೇರಿಕೊಂಡರು. ಕುಪ್ಪಳಿಯ ಕವಿಶೈಲದಲ್ಲಿ ಇಂದಿಗೂ ಅವರ ಸಮಾಧಿ ಇದೆ. ಅವರು ಹುಟ್ಟಿದ ಮನೆಯನ್ನು ಪ್ರವಾಸಿಗರಿಗೆ ಪ್ರವಾಸಿ ಕ್ಷೇತ್ರವನ್ನಾಗಿಸಿದ್ದಾರೆ.

**ವಿಶ್ವ ಮಾನವ ದಿನ :**

ಕರ್ನಾಟಕ ಸರ್ಕಾರವು 2015ರ ಡಿಸೆಂಬರ್‌ನಲ್ಲಿ ಕುವೆಂಪು ಜನ್ಮದಿನವಾದ ಡಿಸೆಂಬರ್ 29 ಅನ್ನು "ವಿಶ್ವ ಮಾನವ" ದಿನವನ್ನಾಗಿ ಆಚರಿಸುವುದಾಗಿ ಆದೇಶ ಹೊರಡಿಸಿತು. ಈ ಮೂಲಕ ವಿಶ್ವಮಾನವ ಸಂದೇಶ ಸಾರಿದ ಕವಿಗೆ ಮತ್ತೊಂದು ಗೌರವ ಮುಡಿಗೇರಿತು. ॐ





# ರಕ್ತದಲ್ಲಿ ಸಕ್ಕರೆ ಕಡಿಮೆಯಾದರೆ ಆರೋಗ್ಯಕ್ಕೆ ತೊಂದರೆ

ಡಾ.ಕೆ.ವಿ.ಸಂತೋಷ್

ಸಾಮಾನ್ಯ ಆರೋಗ್ಯಕರ ವ್ಯಕ್ತಿಗೆ ಸಕ್ಕರೆ ಸದಾ ಕಾಲ 80 – 120 ಎಂಜಿ ಪ್ರತಿ ಡಿಎಲ್ (ಡೆಸಿಲೇಟರ್) ಇರಬೇಕು. ಆ ವ್ಯಕ್ತಿಯು ಊಟ ಮಾಡುತ್ತಿರಲಿ, ಮಲಗಿರಲಿ, ಕೆಲಸ ಮಾಡುತ್ತಿರಲಿ ಅಥವಾ ಇನ್ನಾವುದೇ ದೈಹಿಕ ಚಟುವಟಿಕೆಯಲ್ಲಿ ನಿರತರಾಗಿದ್ದರೂ, ಅಷ್ಟೇ ಪ್ರಮಾಣದಲ್ಲಿ ಸಕ್ಕರೆ ಅಂಶ ಸಮತೋಲಮ ಮಟ್ಟದಲ್ಲಿ ಇರಬೇಕಾಗುತ್ತದೆ. ಒಂದೊಮ್ಮೆ ಈ ಮಟ್ಟವು ಕಡಿಮೆಯಾದರೆ ವ್ಯಕ್ತಿಯ ಆರೋಗ್ಯಕ್ಕೆ ತೊಂದರೆ ಖಂಡಿತ.

ಇದನ್ನು ನಾವು ಕಡಿಮೆ ಸಕ್ಕರೆ ಅಂಶ ಅಥವಾ ಹೈಪೋಗ್ಲೈಸಿಮಿಯ ಎನ್ನುತ್ತೇವೆ. ಯಾರಿಗಾದರೂ, ಎಲ್ಲಿಯಾದರೂ, ಯಾವುದೇ ಸಮಯದಲ್ಲಿ ಕೂಡ ಆಗಬಹುದಾದ ಸಮಸ್ಯೆ ಇದಾಗಿದೆ. ಸಾಮಾನ್ಯವಾಗಿ ಈ ಕಡಿಮೆ ಸಕ್ಕರೆ ಅಂಶ ಸಮಸ್ಯೆಯು ದೀರ್ಘಕಾಲಿನ ಮಧುಮೇಹ ರೋಗ ಇರುವವರಲ್ಲಿ ಅಥವಾ ದೀರ್ಘಕಾಲಿನ ಉಪವಾಸ ಮಾಡುವವರಲ್ಲಿ ಕಂಡುಬರುತ್ತದೆ. ಇಂತಹ ಪರಿಸ್ಥಿತಿ ಎದುರಿಸದೇ ಇರಲು ಆರೋಗ್ಯವನ್ನು ಸದಾ ಕಾಲ ಕಾಪಾಡಿಕೊಳ್ಳಬೇಕು.

ಉದಾಹರಣೆಗೆ ಹೇಳುವುದಾದರೆ ಒಂದು ಗಿಡಕ್ಕೆ ನೀರು ಕಡಿಮೆಯೂ ಆಗಬಾರದು, ಹೆಚ್ಚು ಆಗಬಾರದೋ ಅದೇ ರೀತಿ ನಮ್ಮ ದೇಹಕ್ಕೂ ಕೂಡ ಸಕ್ಕರೆ ಅಂಶ ಕಡಿಮೆಯು ಆಗಬಾರದು, ಹೆಚ್ಚು ಆಗಬಾರದು, ಎರಡು ಕೂಡ ಅತ್ಯಂತ ತೊಂದರೆ ಕೊಡುವ ಪರಿಸ್ಥಿತಿಗಳೇ ಆಗಿವೆ.

ನಾವು ಸೇವಿಸುವ ಆಹಾರದಿಂದ ಗ್ಲುಕೋಸ್ (ಸಕ್ಕರೆ ಅಂಶ) ರಕ್ತಕ್ಕೆ ಸೇರುತ್ತದೆ. ಈ ಅಂಶ ನಮಗೆ ಕೆಲಸ ಮಾಡಲು ತಾಕತ್ತು, ದೇಹದಲ್ಲಿ ಚೈತನ್ಯ ತರುತ್ತದೆ. ಈ ಅಂಶ ಕೊರತೆಯಾದಾಗ ದೇಹದಲ್ಲಿ ಚೈತನ್ಯ ಇಲ್ಲದಂತಾಗಿ ನಿಶ್ಯಕ್ತಿ, ಸುಸ್ತು ಉಂಟಾಗುತ್ತದೆ.

### ದೇಹದಲ್ಲಿ ಸಾಮಾನ್ಯ ಸ್ಥಿತಿ

- ಖಾಲಿ ಹೊಟ್ಟೆಯಲ್ಲಿ=80–120ಎಂಜಿ.
- ಊಟ ಮಾಡಿ ಎರಡು ಗಂಟೆಯ ನಂತರ=90–130ಎಂಜಿ
- ಕಡಿಮೆ ಶುಗರ್ ಮಟ್ಟ=60ಎಂಜಿಗಿಂತ ಕಡಿಮೆ ಕುಸಿದಾಗ
- ಹೆಚ್ಚು ಶುಗರ್ ಮಟ್ಟ=130 ಎಂಜಿಗಿಂತ ಜಾಸ್ತಿ (ಖಾಲಿ ಹೊಟ್ಟೆಯಲ್ಲಿ).

(ಈ ಸಂಖ್ಯೆಯು ವ್ಯಕ್ತಿಯಿಂದ ವ್ಯಕ್ತಿಗೆ, ರಕ್ತ ಪರೀಕ್ಷಾ ವಿಧಾನಗಳಲ್ಲಿ ಹಿದೆ–ಮುಂದೆ ವ್ಯತ್ಯಾಸ ಆಣಬಹುದು) ರಕ್ತದ ಅಂಶ 60ಎಂಜಿ ಕ್ಕಿಂತ ಕಡಿಮೆಯಾಗುವುದು.

**ಕಾರಣಗಳು:**

- ಮಧುಮೇಹಕ್ಕೆ ತೆಗೆದುಕೊಳ್ಳುವ ಔಷಧಿಯಲ್ಲಿ ವ್ಯತ್ಯಾಸ.
- ಇನ್ಸುಲಿನ್ ಪ್ರಮಾಣ ಹೆಚ್ಚು ತೆಗೆದುಕೊಂಡಾಗ.
- ತೀವ್ರ ವ್ಯಾಯಾಮ, ದಿನಗಟ್ಟಲೆ ಉಪವಾಸ ಮಾಡಿರುವಾಗ, ಹೆಚ್ಚು ಮದ್ಯಪಾನ ಮಾಡಿದಾಗ, ಹಾರ್ಮೋನಗಳಲ್ಲಿ ವ್ಯತ್ಯಾಸ ಅಥವಾ ಅಸಮತೋಲನ.
- ಕೆಲವು ರೋಗಗಳಿಗೆ ತೆಗೆದುಕೊಳ್ಳುವ ಮಾತ್ರೆಗಳ ಅಡ್ಡಪರಿಣಾಮಗಳಿಂದ.

**ಕಡಿಮೆ ರಕ್ತದ ಅಂಶ ಆಗಿರುವ ಲಕ್ಷಣಗಳು:**

- ಸುಸ್ತು ಕೈ – ಕಾಲುಗಳಲ್ಲಿ ನಡುಕ.
- ತೀವ್ರ ಹಸಿವು.
- ಆಯಾಸ, ತಲೆಸುತ್ತು.
- ದೃಷ್ಟಿ ಮಸುಕಾಗುವುದು.
- ಏಳಲು ಆಣದಿರುವುದು.
- ತೀವ್ರವಾಗಿ ಬೆವರುವುದು.

**ತಕ್ಷಣಕ್ಕೆ ಏನು ಮಾಡಬೇಕು?**

- ಎಚ್ಚರದ ಸ್ಥಿತಿಯಲ್ಲಿ ಇದ್ದರೆ ತಕ್ಷಣಕ್ಕೆ ಚಾಕಲೇಟು, ಜ್ಯೂಸು, ಸಕ್ಕರೆ ಅಂಶದ ನೀರು, ಗ್ಲುಕೋಸ್ಪುಡಿ ಬಾಯಲ್ಲಿ ಹಾಕಿಕೊಳ್ಳಬೇಕು.(ಮಧುಮೇಹಿಗಳು ಸಕ್ಕರೆ ಅಂತ ತೀವ್ರ ಕುಸಿತದ ಅಪಾಯದಲ್ಲಿ ಇರುವ ಕಾರಣಕ್ಕೆ ಸದಾ ಕಾಲ ತಮ್ಮ ಜೇಬಿನಲ್ಲಿ ಒಂದು ಚಾಕ್ಲೆಟ್ ಇಟ್ಟುಕೊಂಡಿರಬೇಕು)
- ಸ್ವಲ್ಪ ಆರಾಮದ ತಕ್ಷಣ ಊಟ ಮಾಡಬೇಕು.
- ತೀವ್ರ ಸಮಸ್ಯೆ ಇದ್ದಾಗ ಅಗತ್ಯ ವೈದ್ಯಕೀಯ ನೆರವು ಪಡೆಯಬೇಕು.
- ಸಮತೋಲಿತ ಆಹಾರ ಪ್ರತಿದಿನ ನಿಮ್ಮ ದಿನಚರಿಯಲ್ಲಿರಬೇಕು.
- ಇನ್ಸುಲಿನ್ ಮಟ್ಟ ಎಂದಿಗೂ ಅಗತ್ಯಕ್ಕಿಂತ ಹೆಚ್ಚಾಗಿ ತೆಗೆದುಕೊಳ್ಳಬಾರದು.

**ತಡೆಯುವ ಕ್ರಮ:**

- ಮಧುಮೇಹಿಗಳಲ್ಲಿ ಆಗಾಗ ಈ ಸಮಸ್ಯೆ ಬರಬಹುದಾದ ಕಾರಣಕ್ಕೆ ನಿಮ್ಮ ಇನ್ಸುಲಿನ್ ಮಟ್ಟವನ್ನು ಸಮತೋಲನ ಜೊತೆಗೆ ಸಕ್ಕರೆ ಅಂಶ ತೀವ್ರ ಇಳಿಕೆ ಆಗದಂತೆ ನೋಡಿಕೊಳ್ಳುತ್ತಿರಬೇಕು.
- ನಿಯಮಿತವಾಗಿ ಊಟ ಹಾಗೂ ಸಮತೋಲಿತ ಆಹಾರ ಸೇವನೆ ಮಾಡಬೇಕು.
- ದಿನಗಟ್ಟಲೆ ಎಂದಿಗೂ ಉಪವಾಸ ಮಾಡಬಾರದು.
- ಆಗಾಗ ಸಕ್ಕರೆ ಅಂಶಗಳ ಪರೀಕ್ಷೆಯನ್ನು ಮಾಡಿಸಿಕೊಳ್ಳುತ್ತಿರಬೇಕು.
- ನಿಯಮಿತವಾಗಿ ವ್ಯಾಯಾಮ, ದೈಹಿಕ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು.
- ತೀವ್ರ ಸಕ್ಕರೆ ಅಂಶ ಏರಿಕೆ ಆಗಿರುವುದನ್ನು ನಿಯಂತ್ರಿಸಲು ಹೆಚ್ಚು ಮಾತ್ರೆಗಳ ಸೇವನೆಯನ್ನು ಎಂದಿಗೂ ಮಾಡದೆ ಹಂತಹಂತವಾಗಿ ಅದರ ಮಟ್ಟವನ್ನು ಇಳಿಕೆ ಆಗುವಂತೆ ನೋಡಿಕೊಳ್ಳಬೇಕು.
- ತಿಳಿಸಿದ ಮಟ್ಟಕ್ಕಿಂತ ಹೆಚ್ಚು ಇನ್ಸುಲಿನ್ ಎಂದಿಗೂ ತೆಗೆದುಕೊಳ್ಳಬಾರದು.

ಮೇಲೆ ತಿಳಿಸಿದ ಲಕ್ಷಣಗಳಿಂದ ಸಕ್ಕರೆಯ ಅಂಶ ಇಳಿಕೆಯಾಗುತ್ತಿದೆ ಎಂದು ಅನಿಸಿದರೆ ತಕ್ಷಣವೇ ಸಕ್ಕರೆ ಅಂಶ ಏರಿಕೆ ಆಗುವಂತಹ ಆಹಾರ, ಚಾಕಲೇಟ್ ಬಾಯಲ್ಲಿ ಹಾಕಿಕೊಳ್ಳುವುದು/ ಸೇವನೆ ಮಾಡಬೇಕು.

# ಮೊಸಳೆಗೆ ನರಿಯ ಪಾಠ

ಗವಿಯಲ್ಲಿ ವಾಸವಾಗಿದ್ದ ಒಂದು ನರಿಗೆ ಏನೂ ಆಹಾರ ಸಿಕ್ಕಿರಲಿಲ್ಲ. ಅದೊಂದು ನದಿಯ ದಡಕ್ಕೆ ಬಂತು. ನದಿಯ ಇನ್ನೊಂದು ದಡದಲ್ಲಿ ಕೆಂಪು ಕೆಂಪಾದ ಹಣ್ಣುಗಳ ಮರವೊಂದು ಗೋಚರಿಸಿತು. ಅಲ್ಲಿಗೆ ಹೋದರೆ ಬೇಕಾದಷ್ಟು ಹಣ್ಣು ತಿನ್ನಬಹುದೆನಿಸಿತು. ಆದರೆ ನದಿಯಲ್ಲಿ ತುಂಬಾ ನೀರಿದ್ದ ಕಾರಣ ನದಿಗಿಳಿಯಲು ಸಾಧ್ಯವಿರಲಿಲ್ಲ.

ಆ ನರಿಯನ್ನೇ ನೋಡುತ್ತಿದ್ದ ಒಂದು ಮೊಸಳೆಗೆ ಇದು ತನಗೆ ಹೊಟ್ಟೆ ತುಂಬಾ ಆಹಾರವಾಗಬಹುದು ಎಂಬ ಯೋಚಿಸಿ ಉಪಾಯವಾಗಿ ಅದನ್ನು ಹಿಡಿಯಲು ನಿರ್ಧರಿಸಿತು. ಅದು ನರಿ ಬಳಿಗೆ ಹೋಗಿ 'ಏನು ಯೋಚನೆ ಮಾಡುತ್ತಿದ್ದೀಯಾ, ಏನಾಗಬೇಕು?' ಎಂದು ಕೇಳಿತು. ಅದಕ್ಕೆ ನರಿ 'ನದಿಯ ಆಚೆ ದಡದಲ್ಲಿರುವ ಪ್ರಾಣಿಗಳಿಂದ ಇನ್ನೂ ಸುಂಕ ಬಂದಿಲ್ಲವಂತೆ. ಹುಲಿರಾಯರು ವಸೂಲಿ ಮಾಡಿಕೊಂಡು ಬಾ ಎಂದಿದ್ದಾರೆ. ಆದರೆ ನದಿ ದಾಟಲು ಆಗುವುದಿಲ್ಲ' ಎಂದಿತು. 'ಅದಕ್ಕೇನಂತೆ ನಾನು ದಾಟಿಸುತ್ತೇನೆ. ಆದರೆ ನನಗೆ ಅದರ ಸಂಬಳ ಕೊಡಬೇಕು' ಎಂದು ಮೊಸಳೆ ಹೇಳಿ ನರಿಯನ್ನು ಬೆನ್ನಿನ ಮೇಲೆ ಕೂಡಿಸಿಕೊಂಡು ಆಚೆ ದಡಕ್ಕೆ ಹೋಯಿತು. ದಡದಲ್ಲಿ ಕೆಳಗಿಳಿದ ಕೂಡಲೇ ನರಿಯನ್ನು ನುಂಗಬೇಕೆಂದು ಅದು ಎಣಿಸಿಕೊಂಡಿತ್ತು. ಆದರೆ ದಡ ತಲಪುವ ಮೊದಲೇ ನರಿ ಚಂಗನೆ ದಡಕ್ಕೆ ಹಾರಿತು. 'ಸಂಬಳ ಎಲ್ಲಿ?' ಎಂದು ಮೊಸಳೆ ಕೇಳಿದಾಗ 'ಮರಳಿ ಬರುವಾಗ ಎರಡನ್ನೂ ಸೇರಿಸಿ ಕೊಡ್ತೇನೆ' ಎಂದು ಓಡುತ್ತಲೇ ಹೇಳಿದ ನರಿ ಹಣ್ಣಿನ ಮರಗಳ ಬಳಿಗೆ ಹೋಗಿ ಉದುರಿದ್ದ ಹಣ್ಣುಗಳನ್ನು ಹೊಟ್ಟೆ ತುಂಬ ತಿಂದಿತು. ಸಂಜೆಯವರೆಗೆ ಕಾದ ಮೊಸಳೆ ಮತ್ತೆ ನರಿಯನ್ನು ಬೆನ್ನ ಮೇಲೆ ಹೊತ್ತುಕೊಂಡು ಹಿಂತಿರುಗಿತು. ಅದರ ಬುದ್ಧಿವಂತಿಕೆ ಗೊತ್ತಿದ್ದ ಕಾರಣ ಅದು ದಡಕ್ಕೆ ಹಾರುವ ಮೊದಲೇ ಅದರ ಒಂದು ಕಾಲನ್ನು ಹಲ್ಲುಗಳಿಂದ ಗಟ್ಟಿಯಾಗಿ ಹಿಡಿದುಕೊಂಡಿತು.

ಚಾಲಾಕಿ ನರಿ ಜೋರಾಗಿ ನಗುತ್ತ 'ಅಯ್ಯೋ ಮೊಸಳೆಯಣ್ಣ, ಇದೆಂಥ ನಿನ್ನ ಅವಸ್ಥೆ? ನನ್ನ ಕಾಲು ಹಿಡಿದು ನಮಸ್ಕರಿಸಬೇಕು ಅನ್ನುವ ಆಸೆಯಲ್ಲಿ ಕಾಲಿನ ಬದಲು ತೇಲುತ್ತಿರುವ ಒಂದು ಬೇರನ್ನು ಯಾಕೆ ಕಚ್ಚಿಕೊಂಡಿದ್ದೀ? ನನ್ನ ಕಾಲು ಇಲ್ಲಿದೆ ನೋಡು' ಎಂದಿತು. ಆ ಮಾತನ್ನು ನಂಬಿ ಮೊಸಳೆ ಕಾಲನ್ನು ಬಿಟ್ಟ ಕೂಡಲೇ ದಡಕ್ಕೆ ನೆಗೆದು ನರಿ ತಪ್ಪಿಸಿಕೊಂಡಿತು. ಹೇಗಾದರೂ ಮಾಡಿ ನರಿಯನ್ನು ತಿನ್ನದೆ ಬಿಡುವುದಿಲ್ಲ ಎಂದು ಶಪಥ ಮಾಡಿದ ಮೊಸಳೆ ನದಿಯ ದಡದಲ್ಲಿ ಒಂದು ಮರದಿಂದ ತುಂಬ ಹಣ್ಣುಗಳು ಬಿದ್ದಿರುವುದನ್ನು ನೋಡಿತು. ಅದನ್ನು ತಿನ್ನಲು ನರಿ ಬರುವುದು ಅದಕ್ಕೆ ಗೊತ್ತಿತ್ತು. ಆ ಸಮಯದಲ್ಲಿ ಮರದ ಕೆಳಗೆ ಹಣ್ಣುಗಳನ್ನು ರಾಶಿ ಹಾಕಿ ಅದರೊಳಗೆ ಹುದುಗಿಕೊಂಡಿತು.

ನರಿಗೆ ಹಣ್ಣುಗಳ ರಾಶಿ ಕಂಡು ಅನುಮಾನವಾಯಿತು. 'ಹಣ್ಣುಗಳೇ, ಯಾವಾಗಲೂ ನಾನು ಬರುವಾಗ ಮೇಲಕ್ಕೆ ಹಾರುತ್ತಿದ್ದಿರಿ. ಆದರೆ ಇಂದೇನಾಗಿದೆ ನಿಮಗೆ? ಸುಮ್ಮನೆ ಯಾಕೆ ಮಲಗಿದ್ದೀರಿ?' ಎಂದು ಕೇಳಿತು. ಇದನ್ನು ಸತ್ಯವೆಂದೇ ನಂಬಿದ ಮೊಸಳೆ ಬಾಲದಲ್ಲಿ ಹಣ್ಣುಗಳನ್ನು ರಪರಪನೆ ಮೇಲಕ್ಕೆ ಚಿಮ್ಮಿಸಿತು. ಅಲ್ಲಿ ಮೊಸಳೆಯಿರುವುದು ಅರ್ಥವಾದ ಕೂಡಲೇ ನರಿ, 'ಏನು ಮೊಸಳೆಯಣ್ಣ, ಹಣ್ಣುಗಳು ಹಾರುವುದಿಲ್ಲವೆಂದು ನಿನಗೆ ಗೊತ್ತಿಲ್ಲವೆ?' ಎನ್ನುತ್ತ ಓಡಿಹೋಯಿತು.

ಮೊಸಳೆ ಹೊಸ ಉಪಾಯ ಹುಡುಕಿತು. ನರಿಯ ಗವಿಯನ್ನು ಪತ್ತೆ ಮಾಡಿ ಅದರೊಳಗೆ ಹೋಗಿ ಮಲಗಿತು. ಬೇಟೆಗೆ ಹೋದ ನರಿ ಮರಳಿದಾಗ ಗವಿಯೊಳಗೆ ಹೋಗಿರುವ ಮೊಸಳೆಯ ಹೆಜ್ಜೆ ಗುರುತುಗಳನ್ನು ಕಂಡು ನಿಜ ವಿಷಯ ತಿಳಿದುಕೊಂಡು ಗಟ್ಟಿ ದನಿಯಲ್ಲಿ 'ಗುಹೆಯಣ್ಣ, ಯಾವಾಗಲೂ ನಾನು ಬರುವಾಗ ಶಂಖ ಊದಿ ಸ್ವಾಗತಿಸುತ್ತಿದ್ದ ನೀನು ಇಂದೇಕೆ ಮೌನವಾಗಿರುವೆ? ಏನಾಗಿದೆ ನಿನಗೆ?' ಎಂದು ಕೇಳಿತು. ಇದನ್ನು ನಿಜವೆಂದು ಭಾವಿಸಿದ ಮೊಸಳೆ ಶಂಖದಂತೆ ಕೂಗಿತು. ಮೊಸಳೆಯ ಮೋಸ ತಿಳಿದ ಕೂಡಲೇ ನರಿ 'ಅಯ್ಯೋ ಬೆಪ್ಪು ಮೊಸಳೆಯಣ್ಣ, ಗವಿ ಎಂದಿಗಾದರೂ ಕೂಗುವುದುಂಟೆ? ನಿನಗಷ್ಟೂ ಗೊತ್ತಿಲ್ಲವೆ?' ಎಂದು ನಗುತ್ತ ಅಲ್ಲಿಂದ ದೂರ ಓಡಿಹೋಯಿತು.

ಮೊಸಳೆ ಇನ್ನೂ ಒಂದು ಉಪಾಯ ಹುಡುಕಿತು. ತನ್ನ ಹೆಂಡತಿಯನ್ನು ನರಿಯ ಬಳಿಗೆ ಕಳುಹಿಸಿತು. ಹೆಣ್ಣು ಮೊಸಳೆ ಕಣ್ಣೀರಿಳಿಸುತ್ತ 'ನಿನ್ನ ಅಣ್ಣ ಅಂದರೆ ನನ್ನ ಗಂಡ ಮೊಸಳೆ ಸತ್ತು ಹೋಗಿದೆ. ನನಗೆ ಕೊಡಬೇಕಾದ ಸಂಬಳವನ್ನಂತೂ ನರಿ ಕೊಡಲಿಲ್ಲ. ಅಂತ್ಯ ಸಂಸ್ಕಾರವನ್ನಾದರೂ ಮಾಡಿ ಸದ್ಗತಿ ಸಿಗುವಂತೆ ಮಾಡಲಿ ಎಂದು ಕೊನೆಯಾಸೆ ಹೇಳಿಕೊಂಡಿತ್ತು. ಆದ್ದರಿಂದ ನೀನು ಬಂದು ಅದರ ಬಯಕೆ ನೆರವೇರಿಸಬೇಕು' ಎಂದು ಕೇಳಿಕೊಂಡಿತು. ನರಿ ಅದರ ಜೊತೆಗೆ ಹೋಯಿತು. ಮರದ ಕೆಳಗೆ ನಿಶ್ಚಲವಾಗಿ ಮಲಗಿದ್ದ ಮೊಸಳೆಯನ್ನು ನೋಡಿ 'ಇದು ಸತ್ತ ಹಾಗೆ ಕಾಣಿಸುವುದಿಲ್ಲವಲ್ಲ. ಸತ್ತವರು ಕಣ್ಣಿನ ರೆಪ್ಪೆ ಪಟಪಟ ಬಡಿಯುತ್ತಾರೆ. ನಾಲಿಗೆ ಹೊರಗೆ ಚಾಚುತ್ತಾರೆ. ಇದಕ್ಕೆ ಅಂತಹ ಯಾವ ಲಕ್ಷಣಗಳೂ ಕಾಣಿಸುತ್ತಿಲ್ಲ' ಎಂದಿತು. ಆಗ ತಾನು ಸತ್ತಿದ್ದೇನೆಂದು ತೋರಿಸಿಕೊಳ್ಳಲು ಮೊಸಳೆ ಕಣ್ಣರೆಪ್ಪೆಗಳನ್ನು ಪಟಪಟ ಬಡಿಯುತ್ತ ನಾಲಿಗೆ ಹೊರಗೆ ಹಾಕಿತು. ನರಿ ಜೋರಾಗಿ ನಕ್ಕು 'ಹೆಡ್ಡ, ಸತ್ತವರು ರೆಪ್ಪೆ ಬಡಿಯುವುದು ಎಲ್ಲಾದರೂ ಉಂಟೆ? ನಿನ್ನ ಮೋಸದ ಬಲೆಗೆ ನಾನು ಎಂದಿಗೂ ಸಿಲುಕುವುದಿಲ್ಲ' ಎಂದು ಹೇಳಿ ದೂರ ಓಡಿತು. ಮೊಸಳೆಗೆ ನಾಚಿಕೆಯಾಗಿ ಆ ಪ್ರದೇಶದಿಂದಲೇ ಹೋಗಿಬಿಟ್ಟಿತು. ಓಂ

**ಮನೆ ಮದ್ದು :**
ದಿನವೂ ಬೆಳಿಗ್ಗೆ ಎದ್ದು ಹಲ್ಲುಜ್ಜುವ ಮುನ್ನ ಖಾಲಿ ಹೊಟ್ಟೆಯಲ್ಲಿ ಎರಡು ಅಥವಾ ಮೂರು ಲೋಟಗಳಷ್ಟು ಬಿಸಿ ನೀರನ್ನು ಸೇವಿಸಿದರೆ ಹೊಟ್ಟೆಯ ಅನೇಕ ತೊಂದರೆಗಳಿಂದ ಮುಕ್ತಿ.



## ಆರೋಗ್ಯಕರ ಮಣ್ಣಿನ ಮಹತ್ವವನ್ನು ತೋರಿಸುವ ಮತ್ತು ಸುಸ್ಥಿರ ಮಣ್ಣಿನ ನಿರ್ವಹಣೆಗೆ ಉತ್ತೇಜನ

# ವಿಶ್ವ ಮಣ್ಣು ದಿನ

ವಿಶ್ವ ಮಣ್ಣು ದಿನ: ವಿಶ್ವ ಮಣ್ಣು ದಿನವು ಜನಸಂಖ್ಯಾ ವಿಸ್ತರಣೆಯಿಂದಾಗಿ ಹೆಚ್ಚುತ್ತಿರುವ ಸಮಸ್ಯೆಯನ್ನು ಎತ್ತಿ ತೋರಿಸುತ್ತದೆ. ಆದ್ದರಿಂದ, ಮಣ್ಣಿನ ಸವೆತವನ್ನು ಕಡಿಮೆ ಮಾಡಲು, ಫಲವತ್ತತೆಯನ್ನು ಕಾಪಾಡಿಕೊಳ್ಳಲು ಒಂದು ಹೆಜ್ಜೆ ಇಡುವುದು ಅವಶ್ಯಕ, ಇದರಿಂದ ಆಹಾರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಬಹುದು.

ಮಣ್ಣು ಖನಿಜಗಳು, ಸಾವಯವ ವಸ್ತುಗಳು ಮತ್ತು ಗಾಳಿಯಿಂದ ವಿಭಿನ್ನ ಪ್ರಮಾಣದಲ್ಲಿ ಮಾಡಲ್ಪಟ್ಟಿದೆ. ಇದು ಸಸ್ಯದ ಬೆಳವಣಿಗೆಗೆ ಮಾಧ್ಯಮವನ್ನು, ಹಲವಾರು ಕೀಟಗಳು ಮತ್ತು ಇತರ ಜೀವಿಗಳಿಗೆ ಆವಾಸಸ್ಥಾನವನ್ನು ಒದಗಿಸುವುದರಿಂದ ಇದು ಜೀವನಕ್ಕೆ ಮುಖ್ಯವಾಗಿದೆ. ಇದು ಮೇಲ್ಮೈ ನೀರಿಗಾಗಿ ಶೋಧನೆ ವ್ಯವಸ್ಥೆಯಾಗಿ ಮತ್ತು ವಾತಾವರಣದ ಅನಿಲಗಳ ನಿರ್ವಹಣೆಯಲ್ಲಿಯೂ ಕಾರ್ಯನಿರ್ವಹಿಸುತ್ತದೆ. ಇದು ಆಹಾರ, ಬಟ್ಟೆ, ಆಶ್ರಯ ಮತ್ತು ಔಷಧ ಸೇರಿದಂತೆ ನಾಲ್ಕು ಅಗತ್ಯ 'ಜೀವಂತ' ಅಂಶಗಳ ಮೂಲವಾಗಿದೆ. ಆದ್ದರಿಂದ, ಮಣ್ಣಿನ ಸಂರಕ್ಷಣೆ ಅಗತ್ಯ. ಆದ್ದರಿಂದ, ಮಣ್ಣಿನ ನಷ್ಟದ ಬಗ್ಗೆ ಜಾಗೃತಿ ಮೂಡಿಸಲು, ಡಿಸೆಂಬರ್ 5 ರಂದು ವಿಶ್ವ ಮಣ್ಣಿನ ದಿನವನ್ನು ಆಚರಿಸಲಾಗುತ್ತದೆ.

### ವಿಶ್ವ ಮಣ್ಣು ದಿನದ ಇತಿಹಾಸ

2002 ರಲ್ಲಿ, ಅಂತರರಾಷ್ಟ್ರೀಯ ಮಣ್ಣು ವಿಜ್ಞಾನ ಒಕ್ಕೂಟವು ವಾರ್ಷಿಕವಾಗಿ ಡಿಸೆಂಬರ್ 5 ರಂದು ವಿಶ್ವ ಮಣ್ಣು ದಿನವನ್ನು ಆಚರಿಸಲು ಶಿಫಾರಸು ಮಾಡಿತು. ಅಲ್ಲದೆ, ಥೈಲ್ಯಾಂಡ್ ಸಾಮ್ರಾಜ್ಯದ ನೇತೃತ್ವದಲ್ಲಿ ಮತ್ತು ಜಾಗತಿಕ ಮಣ್ಣಿನ ಪಾಲುದಾರಿಕೆಯ ಚೌಕಟ್ಟಿನೊಳಗೆ ಜಾಗತಿಕ ಜಾಗೃತಿ ಮೂಡಿಸುವ ವೇದಿಕೆಯಾಗಿ ವಿಶ್ವ ಮಣ್ಣು ದಿನವನ್ನು ಔಪಚಾರಿಕವಾಗಿ ಸ್ಥಾಪಿಸಲು FAO ಬೆಂಬಲ ನೀಡಿತು. ಜೂನ್ 2013 ರಲ್ಲಿ FAO ಸಮ್ಮೇಳನವನ್ನು ಸರ್ವಾನುಮತದಿಂದ ವಿಶ್ವ ಮಣ್ಣು ದಿನವೆಂದು ಅನುಮೋದಿಸಲಾಯಿತು ಮತ್ತು 68 ನೇ UN ಸಾಮಾನ್ಯ ಸಭೆಯಲ್ಲಿ ಇದನ್ನು ಅಧಿಕೃತವಾಗಿ ಅಳವಡಿಸಿಕೊಳ್ಳುವಂತೆ ವಿನಂತಿಸಲಾಯಿತು. ಡಿಸೆಂಬರ್ 2013 ರಲ್ಲಿ, 68 ನೇ ಅಧಿವೇಶನದಲ್ಲಿ UN ಸಾಮಾನ್ಯ ಸಭೆಯು ಡಿಸೆಂಬರ್ 5 ಅನ್ನು ವಿಶ್ವ ಮಣ್ಣು ದಿನವೆಂದು ಘೋಷಿಸಿತು. ಮೊದಲ ವಿಶ್ವ ಮಣ್ಣು ದಿನವನ್ನು ಡಿಸೆಂಬರ್ 5, 2014 ರಂದು ಆಚರಿಸಲಾಯಿತು.

### ಮಣ್ಣಿನ ಸಂರಕ್ಷಣೆ ಮತ್ತು ಅದರ ವಿಧಾನಗಳು

ಮಣ್ಣಿನ ಸಂವಾದವು ಮಣ್ಣನ್ನು ಸಂರಕ್ಷಿಸುವ ವಿಧಾನವಾಗಿದೆ. ಮಣ್ಣಿನ ಫಲವತ್ತತೆ ನಷ್ಟಕ್ಕೆ ಹಲವಾರು ಕಾರಣಗಳಿವೆ, ಅವುಗಳಲ್ಲಿ ಅತಿಯಾದ ಬಳಕೆ, ಸವೆತ, ಲವಣಾಂಶ ಮತ್ತು ರಾಸಾಯನಿಕ ಮಾಲಿನ್ಯ ಸೇರಿವೆ.

ಮಣ್ಣಿನ ಸವೆತ ಎಂದರೆ ಮೇಲಿನ ಮಣ್ಣನ್ನು ತೆಗೆದುಹಾಕುವುದು, ಇದು ಸಸ್ಯಗಳ ಬೆಳವಣಿಗೆಗೆ ಮತ್ತು ಅದರ ಹೊಳಪಿಗೆ ಅಗತ್ಯವಾದ ಪೋಷಕಾಂಶಗಳು, ಸೂಕ್ಷ್ಮಜೀವಿಗಳಿಗೆ ಮುಖ್ಯವಾಗಿದೆ. ಮಣ್ಣಿನ ಸಂರಕ್ಷಣೆಯು ಮಣ್ಣನ್ನು ಕೊಚ್ಚಿಕೊಂಡು ಹೋಗದಂತೆ ರಕ್ಷಿಸುವ ಒಂದು ಹೆಜ್ಜೆ ಎಂದು ನಾವು ನಿಮಗೆ ಹೇಳೋಣ. ಮಣ್ಣನ್ನು ಸಂರಕ್ಷಿಸಲು ವಿವಿಧ ಮಾರ್ಗಗಳಿವೆ.

1. **ಬಾಹ್ಯರೇಖೆ ಉಳುಮೆ:** ಬೆಳೆಯನ್ನು ನೆಡುವ ಬದಲು, ಅಪೇಕ್ಷಿತ ಕೃಷಿ ಭೂಮಿಯನ್ನು ಪಡೆಯಲು ಬಾಹ್ಯರೇಖೆ ಉಳುಮೆ ಮಾಡಲಾಗುತ್ತದೆ. ಇಳಿಜಾರುಗಳಲ್ಲಿನ ಕೃಷಿ ಭೂಮಿಯಲ್ಲಿ ನೀರು ಹರಿದು ಹೋಗುವುದನ್ನು ತಡೆಗಟ್ಟಲು ಮತ್ತು ಬೆಳೆ ಇಳುವರಿಯನ್ನು ಹೆಚ್ಚಿಸಲು ಇದನ್ನು ಮಾಡಲಾಗುತ್ತದೆ. ಅಥವಾ ಮಣ್ಣಿನ ಸವೆತವನ್ನು ಕಡಿಮೆ ಮಾಡಲು, ಭೂಮಿಯ ಬಾಹ್ಯರೇಖೆಗಳ ಉದ್ದಕ್ಕೂ ಉಳುಮೆ ಮಾಡಲಾಗುತ್ತದೆ.
2. **ಟೆರೇಸ್ ಕೃಷಿ:** ಇದು ಬಹು, ಸಮತಟ್ಟಾದ ಸಮತಟ್ಟಾದ ಪ್ರದೇಶಗಳನ್ನು ಬೆಟ್ಟಗಳಾಗಿ ಕೊರೆಯುವ ಒಂದು ವಿಧಾನವಾಗಿದೆ. ಇದನ್ನು ಮಣ್ಣಿನಿಂದ ನೀರು ಹರಿದು ಹೋಗುವುದನ್ನು ತಡೆಯಲು ಮತ್ತು ಮಣ್ಣಿನಲ್ಲಿ ಪೋಷಕಾಂಶಗಳನ್ನು ಹಿಡಿದಿಟ್ಟುಕೊಳ್ಳಲು ಮಾಡಲಾಗುತ್ತದೆ.
3. **ಗಾಳಿ ತಡೆಗಳು:** ಗಾಳಿ ಸವೆತವನ್ನು ತಡೆಗಟ್ಟಲು, ಈ ವಿಧಾನದಲ್ಲಿ ಕೃಷಿ ಭೂಮಿಯ ಸುತ್ತಲೂ ಮರಗಳನ್ನು ದಟ್ಟವಾದ ಮಾದರಿಗಳಲ್ಲಿ ಬೆಳೆಸಲಾಗುತ್ತದೆ.
4. **ಬೆಳೆ ಸರದಿ:** ಮಣ್ಣನ್ನು ಪೋಷಕಾಂಶಗಳಲ್ಲಿ ಮೌಲ್ಯಯುತವಾಗಿಸಲು ಬೆಳೆ ಸರದಿ ತಂತ್ರವನ್ನು ಅನುಸರಿಸಲಾಗುತ್ತದೆ. ಮಣ್ಣಿನ ಪೌಷ್ಟಿಕ ಮೌಲ್ಯವನ್ನು ಕಾಪಾಡಿಕೊಳ್ಳಲು ಟರ್ನಿಪ್ ಮತ್ತು ಮೂಲಂಗಿಗಳಂತೆ ವಾಣಿಜ್ಯ ಬೆಳೆಗಳೊಂದಿಗೆ ಸರದಿ ಬೆಳೆ ಮಾಡಲಾಗುತ್ತದೆ.
5. **ಕೃಷಿಶಾಸ್ತ್ರೀಯ ಕ್ರಮಗಳು:** ಹೆಚ್ಚು ಸವೆತಕ್ಕೊಳಗಾದ ಪ್ರದೇಶಗಳಲ್ಲಿ, ಹುಲ್ಲುಗಳನ್ನು ನೆಡಲಾಗುತ್ತದೆ ಮತ್ತು ಈ ತಂತ್ರವನ್ನು ಕೃಷಿಶಾಸ್ತ್ರೀಯ ಕ್ರಮಗಳು ಎಂದು ಕರೆಯಲಾಗುತ್ತದೆ. ಇದು ಮಣ್ಣಿನಲ್ಲಿ ಪೋಷಕಾಂಶಗಳ ಮಟ್ಟವನ್ನು ಹೆಚ್ಚಿಸುತ್ತದೆ ಮತ್ತು ಹುಲ್ಲನ್ನು ಕೊಯ್ಲು ಮಾಡಿದಾಗ ಅದನ್ನು ದನಗಳಿಗೆ ಮೇವಾಗಿ ಬಳಸಬಹುದು.
6. **ಉಳುಮೆ ರಹಿತ ಕೃಷಿ:** ಮಣ್ಣಿನ ಮೇಲ್ಮೈ ಲಕ್ಷಣವನ್ನು ಬದಲಾಯಿಸದೆ, ವರ್ಷಪೂರ್ತಿ ಉಳುಮೆ ಅಥವಾ ಬಾಹ್ಯರೇಖೆ ಮಾಡುವ ಮೂಲಕ ಬೆಳೆಗಳನ್ನು ಬೆಳೆಯಲಾಗುತ್ತದೆ. ಈ ವಿಧಾನವು ಮಣ್ಣನ್ನು ಭೇದಿಸುವ ನೀರಿನ ಪ್ರಮಾಣವನ್ನು ಹೆಚ್ಚಿಸುತ್ತದೆ ಮತ್ತು ಮಣ್ಣಿನ ಸಾವಯವ ಪದಾರ್ಥವನ್ನು ಹೆಚ್ಚಿಸುತ್ತದೆ, ಇದು ಹೆಚ್ಚಿನ ಇಳುವರಿಗೆ ಕಾರಣವಾಗುತ್ತದೆ.
7. **ಹಸಿರು ಗೊಬ್ಬರಗಳು:** ಹಸಿರು ಗೊಬ್ಬರಗಳನ್ನು ಅದು ಬೆಳೆಯುವ ಕೃಷಿ ಭೂಮಿಯನ್ನು ಫಲವತ್ತಾಗಿಸಲು ಬೆಳೆಯಲಾಗುತ್ತದೆ. ಈ ತಂತ್ರವು ಮಣ್ಣಿನ ರಚನೆಯನ್ನು ಸುಧಾರಿಸುತ್ತದೆ ಮತ್ತು ಕಳೆಗಳ ಬೆಳವಣಿಗೆಯನ್ನು ನಿಗ್ರಹಿಸುತ್ತದೆ.
8. **ಲವಣಾಂಶ ನಿರ್ವಹಣೆ:** ಮಣ್ಣಿನಿಂದ ನೀರು ಆವಿಯಾದಾಗ, ಉಪ್ಪು ಉಳಿಯುತ್ತದೆ ಮತ್ತು ಇದು ಮಣ್ಣಿಗೆ ಹಾನಿ ಮತ್ತು ಪೋಷಕಾಂಶಗಳ ನಷ್ಟಕ್ಕೆ ಕಾರಣವಾಗಬಹುದು. ಇದನ್ನು ತಡೆಗಟ್ಟಲು ಹ್ಯೂಮಿಕ್ ಆಮ್ಲಗಳನ್ನು ಬಳಸಲಾಗುತ್ತದೆ. ಮತ್ತು ಮಣ್ಣನ್ನು ಪುನರುಜ್ಜೀವನಗೊಳಿಸಲು ಮತ್ತು ಪೋಷಕಾಂಶಗಳ ನಷ್ಟವನ್ನು ಬದಲಾಯಿಸಲು ಉಪ್ಪು ಪೊದೆಗಳನ್ನು ಸಹ ಬೆಳೆಯಲಾಗುತ್ತದೆ.
9. **ಎರೆಹುಳುಗಳು:** ಎರೆಹುಳುಗಳು ನೆಲದಡಿಯಲ್ಲಿ ಕೊರೆದು ನೀರು ವಿಶ್ರಾಂತಿ ಪಡೆಯಲು ಹೆಚ್ಚಿನ ಪ್ರದೇಶವನ್ನು ಒದಗಿಸುವುದರಿಂದ ಕೃಷಿ ಭೂಮಿಯಿಂದ ಹೆಚ್ಚಿನ ಪ್ರಯೋಜನಗಳನ್ನು ಹೊಂದಿವೆ. ಮಣ್ಣಿನಲ್ಲಿರುವ ಎರೆಹುಳುಗಳ ಮಲವಿಸರ್ಜನೆಯು ಬೆಳೆಗಳಿಗೆ ಪೋಷಕಾಂಶಗಳನ್ನು ಒದಗಿಸುತ್ತದೆ. ಅವು ಮಣ್ಣಿನ ಸವೆತವನ್ನು ತಡೆಯಲು ಸಹಾಯ ಮಾಡುತ್ತದೆ ಮತ್ತು ಹೆಚ್ಚಿನ ಬೆಳೆ ಇಳುವರಿಗೆ ಕಾರಣವಾಗುತ್ತವೆ. ಆದ್ದರಿಂದ, ನಮ್ಮ ಜೀವನದಲ್ಲಿ ಮಣ್ಣಿನ ಮಹತ್ವದ ಬಗ್ಗೆ ಜಾಗೃತಿ ಮೂಡಿಸಲು ಪ್ರತಿ ವರ್ಷ ಡಿಸೆಂಬರ್ 5 ರಂದು ವಿಶ್ವ ಮಣ್ಣು ದಿನವನ್ನು ಆಚರಿಸಲಾಗುತ್ತದೆ.

ॐ

Printed by Arvind, Published Edited and Owned by Dr. D.C. Ramachandra, No.66, Doddasomanahalli, Magadi Tq, Bengaluru South Dist. and Printed at Computer World, Near G.T. Mall, Mallige Thota, Magadi Road, Bengaluru - 560 023. **Editor: Dr. C. Nanjundaiah.**



# ಸಮೃದ್ಧಿ ಭೈರವ ಭವನ



**T.M. ರೋಡ್, ಚುಂಚನಹಳ್ಳಿ, ಶ್ರೀ ಆದಿಚುಂಚನಗಿರಿ ಕ್ಷೇತ್ರ**




ಶ್ರೀ ಭೈರವೇಶ್ವರ ಸ್ವಾಮಿ ಭುಕ್ತಿ ಸೇವೆ, ಮದುವೆ, ನಾಮಕರಣ, ಆರತಕ್ಷತೆ,
ಭೀಗರ ಔತಣ, ಮುಂತಾದ ಶುಭ-ಸಮಾರಂಭಗಳಿಗೆ ಸಂಪರ್ಕಿಸಿ

## 7795808178, 8722127146



Registered with Registrar of News Papers for India No.KARKAN/2018/76081, **Sampreethi Samruddhi,** Dec.- 2025.
License to post without prepayment. License No.**KA/BG/CNA/119/2025-2027,**
Date of publication: **28.11.2025.** Posted at **Magadi Sub Post Office-562120** on **29th** of every month




To,

If undelivered please return to :
The Editor
**Sampreethi Sadan**
Govt. Hospital Parallel Road,
Magadi Town, Magadi - 562120